ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 20 ಮೇ 18, 1980 ಬೆಲೆ : 50 ಪೈಸೆ

ಸರ್ವಾಧಿಕಾರಕ್ಕೆ ಬುನಾದಿ

ತಮಿಳುನಾಡಿನಲ್ಲಿ ಚುನಾವಣಾ ಪ್ರಚಾರ ಮಾಡುತ್ತಾ ಶ್ರೀಮತಿ ಇಂದಿರಾಗಾಂಧಿಯವರು ಕೇಂದ್ರ ಸರಕಾರದ ಜನೋಪಕಾರಿ ಕಾರ್ಯಕ್ರಮವನ್ನು ಜಾರಿಗೊಳಿಸಲು ಎಲ್ಲ ರಾಜ್ಯಗಳಲ್ಲೂ ತಮ್ಮ ಪಕ್ಷದವರನ್ನೇ ಆರಿಸಬೇಕೆಂದು ಘೋಷಿಸಿದ್ದಾರೆ. ಕೇಂದ್ರದಲ್ಲೂ ರಾಜ್ಯಗಳಲ್ಲೂ ಒಂದೇ ಪಕ್ಷದ ಸರಕಾರವಿರಬೇಕೆಂದು ಹೇಳಿದ್ದಾರೆ.

ಇದು ತೀರಾ ಅಪಾಯಕಾರಿಯಾದ ಕರೆಯಾಗಿದೆ. ರಾಜ್ಯಗಳಲ್ಲಿ ಇತರ ಪಕ್ಷಗಳು ಬಹುಮತ ಪಡೆದು ಅಧಿಕಾರಕ್ಕೆ ಬಂದರೆ ಜನರಿಗೆ ಹಿತಮಾಡುವ ಕ್ರಮಗಳಿಗೆ ಅದರಿಂದ ಅಡ್ಡಿಯಾಗುತ್ತದೆಂಬ ತಪ್ಪು ಮತ್ತು ಅಪಾಯಕಾರಿಯಾದ ವಿಚಾರವನ್ನು ಅವರು ಆಪಾದಿಸಿದ್ದಾರೆ. ಇದು ಖಂಡನೀಯವಾಗಿದೆ. ಇದಕ್ಕೆ ಯಾವ ಆಧಾರವೂ ಇಲ್ಲ. ಇದು ಪ್ರಜಾಪ್ರಭುತ್ವಕ್ಕೆ ವಿರೋಧವಾದುದು. ಇದು ಪ್ರಜಾಪ್ರಭುತ್ವ ವಿರೋಧಿಯೆಂದೂ, ರಾಜ್ಯಗಳ ಸ್ವಾಯತ್ತತೆಯನ್ನು ಮೊಟಕುಗೊಳಿಸುವ ಕ್ರಮವೆಂದೂ ನಮ್ಮ ಪಾರ್ಟಿಯು ಅಭಿಪ್ರಾಯಪಡುತ್ತದೆ.

ಕೇಂದ್ರ ಸರಕಾರ ಕೈಗೊಳ್ಳುವ ಕ್ರಮಗಳೆಲ್ಲವೂ ಜನಹಿತವಾದುದೆಂದು ಯಾರೂ ಒಪ್ಪಲು ಸಾಧ್ಯವಿಲ್ಲ. ಸ್ಥಾನಬದ್ಧತಾ ಶಾಸನವೇ

ಸಂಪಾದಕೀಯ

ಇದಕ್ಕೆ ಸಾಕ್ಷಿಯಾಗಿದೆ. ಇದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿರುವ ಎಡ ಮತ್ತು ಪ್ರಜಾಪ್ರಭುತ್ವ ರಾಜ್ಯಸರಕಾರಗಳು ಜಾರಿಗೊಳಿಸಲು ನಿರಾಕರಿಸಿವೆ. ಹಾಗೆನೇ ಕೇಂದ್ರದ ಆರ್ಥಿಕ-ರಾಜಕೀಯ ಧೋರಣೆಗಳು ಜನವಿರೋಧಿಯಾಗಿದ್ದರೆ ಅವೆಲ್ಲವನ್ನೂ ರಾಜ್ಯಸರಕಾರಗಳು ಕಡ್ಡಾಯವಾಗಿ ಅನುಸರಿಸಬೇಕೆಂಬುದರಲ್ಲಿ ಅರ್ಥವಿಲ್ಲ.

ಕೇಂದ್ರ ಬಲಿಷ್ಠವಾಗಿರಬೇಕೆಂಬುದರಲ್ಲಿ ಯಾವ ವಿವಾದವೂ ಇಲ್ಲ. ಆದರೆ ವಿದೇಶಾಂಗ ನೀತಿ, ಸಂಪರ್ಕ, ರಕ್ಷಣಾ ಇಲಾಖೆಗಳನ್ನು ಬಿಟ್ಟು ಇತರ ಎಲ್ಲಾ ಅಧಿಕಾರಗಳೂ ರಾಜ್ಯಗಳಲ್ಲಿರಬೇಕು.

ಅದೇ ರೀತಿಯಲ್ಲಿ ರಾಜ್ಯಗಳಲ್ಲಿ ವಿವಿಧ ರಾಜಕೀಯ ಪಕ್ಷಗಳಿಗೆ ಅಧಿಕಾರ ನಡೆಸಲು ಸಂಪೂರ್ಣ ಅವಕಾಶವಿರಬೇಕು.

ಹಲವು ವರ್ಷಗಳ ಕಾಲ ಕಾಂಗ್ರೆಸ್ ಪಕ್ಷವೊಂದೇ ಕೇಂದ್ರದಲ್ಲೂ, ರಾಜ್ಯಗಳಲ್ಲೂ ಅಧಿಕಾರದಲ್ಲಿದ್ದರೂ ದೇಶದಲ್ಲಿ ಭದ್ರತೆಯಾಗಲೀ, ದೇಶದ ಅಭಿವೃದ್ಧಿಯಾಗಲೀ ಆಗಲಿಲ್ಲ. ಒಂದೇ ಪಕ್ಷದ ಕೈಯಲ್ಲಿ ಅಧಿಕಾರವಿರಬೇಕೆನ್ನುವುದು ಸರ್ವಾಧಿಕಾರಿ ಪ್ರವೃತ್ತಿಯಾಗಿದೆ. ಇದರಿಂದ ಗಂಡಾಂತರವಿದೆ. ಈ ವಾದವನ್ನು ಪ್ರಜಾಪ್ರಭುತ್ವವಾದಿಗಳು ಒಪ್ಪಲು ಸಾಧ್ಯವಿಲ್ಲ. ಈಗ ನಡೆಯಲಿರುವ ಒಂಬತ್ತು ರಾಜ್ಯಗಳ ಶಾಸನಸಭೆಗಳ ಚುನಾವಣೆಯಲ್ಲಿ ಮತದಾರರು ಎಚ್ಚರಿಕೆವಹಿಸಿ ಇಂದಿರಾ ಕಾಂಗ್ರೆಸ್ಸಿನ ವಿರುದ್ಧ ಮತನೀಡಿ ಪ್ರಜಾಪ್ರಭುತ್ವವನ್ನು ರಕ್ಷಿಸುವರೆಂದು ನಂಬುತ್ತೇವೆ.

ಸರಕಾರದ ಪ್ರತಿಗಾಮಿ ನೀತಿಯ ಖಂಡನೆ
ರಾಜ್ಯಸಮಿತಿಯ ನಿರ್ಣಯ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ರಾಜ್ಯಸಮಿತಿಯ ಸಭೆಯು ಬಿಜಾಪುರದಲ್ಲಿ ತಾ. 12 ಮತ್ತು 13ರಂದು ಸೇರಿ ಪ್ರಾಂತದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶೆ ಮಾಡಿ ಕೆಲವು ತೀರ್ಮಾನಗಳನ್ನು ಮಾಡಿದೆ. ಈಗಿನ ಮಂತ್ರಿಮಂಡಲದಿಂದ ಜನತೆಗೆ ಯಾವ ಅನುಕೂಲಕರ ಕಾರ್ಯಕ್ರಮವೂ ಆಗುತ್ತಿಲ್ಲವೆಂದೂ ಅದೊಂದು ಪ್ರತಿಗಾಮಿ ಮತ್ತು ಜನವಿರೋಧಿ ಸರಕಾರವಾಗಿರುವುದು ಸಾಮಾನ್ಯ ಜನತೆಗೂ ಸ್ಪಷ್ಟವಾಗುತ್ತಿದೆಯೆಂದೂ ರಾಜ್ಯಸಮಿತಿಯು ಅಭಿಪ್ರಾಯಪಟ್ಟಿತು.

ಮುಖ್ಯವಾಗಿ ಕಾರ್ಮಿಕರಂಗದಲ್ಲಿ ಅದು ತಳೆಯುವ ಕಾರ್ಮಿಕ ವಿರೋಧಿ ನೀತಿಯನ್ನು ಸಮಿತಿಯು ತೀವ್ರವಾಗಿ ಖಂಡಿಸಿತು. ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ತುಳಿಯುತ್ತಾ ಮಾಲಿಕರ ಪರವಾಗಿ ಸರಕಾರ ವರ್ತಿಸುತ್ತಿರುವುದು ಸ್ಪಷ್ಟವಾಗಿದೆ. ಮುಷ್ಕರಗಳನ್ನು ಕಾನೂನು ಬಾಹಿರವೆಂದು ಸಾರುವುದು, ಸಿಗರೇಟ್ ಕಾರ್ಖಾನೆಯ ಮುಷ್ಕರವನ್ನು ಬಹಿಷ್ಕರಿಸಿದ್ದು, ತಾತಗುಣಿ ಎಸ್ಟೇಟ್ ಕಾರ್ಮಿಕರನ್ನು ಬಂಧಿಸಿದ್ದು, ಈಗ ಕಾರ್ಮಿಕ ನಾಯಕರಾದ ಎಸ್. ಸೂರ್ಯನಾರಾಯಣರಾವ್ ಮತ್ತಿತರರನ್ನು ಗಡೀಪಾರು ಮಾಡುವ ಯೋಚನೆ ಮಾಡುತ್ತಿರುವುದು ಕಾರ್ಮಿಕರಿಗೂ, ಇತರ ಪ್ರಜಾಪ್ರಭುತ್ವವಾದಿಗಳಿಗೂ ಸವಾಲಾಗಿ ಬಂದಿದೆ. ಇದನ್ನು ಎಲ್ಲರೂ ಐಕ್ಯತೆಯಿಂದ ಎದುರಿಸಬೇಕೆಂದೂ ಸರಕಾರದ ನೀತಿಯನ್ನು ಸೋಲಿಸಬೇಕೆಂದೂ ರಾಜ್ಯಸಮಿತಿಯು ಕರೆಯಿತ್ತಿದೆ.

ಬೆಳಗಾಂನ ಅಲ್ಯೂಮಿನಿಯಂ ಕಾರ್ಖಾನೆಯ ಕಾರ್ಮಿಕರ, ಪವರ್‌ಲೂಂ ಕಾರ್ಖಾನೆಗಳ ಕಾರ್ಮಿಕರ, ಹೋಮಿಯೋಪೆಥಿಕ್ ಕಾಲೇಜಿನ ವಿದ್ಯಾರ್ಥಿಗಳ ಮತ್ತು ಸ್ಟಾಫ್‌ನವರ ಹೋರಾಟಗಳಿಗೆ ರಾಜ್ಯಸಮಿತಿಯು ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿರುವುದಲ್ಲದೆ ಸರಕಾರ ಕೂಡಲೇ ಮಧ್ಯಪ್ರವೇಶಮಾಡಿ ಈ ಮುಷ್ಕರಗಳನ್ನು ಇತ್ಯರ್ಥಪಡಿಸಬೇಕೆಂದು ಕೋರಿದೆ.


ಬಿಜಾಪುರ ಜಿಲ್ಲೆಯ ಪಿ.ಡಬ್ಲ್ಯು.ಡಿ. ಗ್ಯಾಂಗ್‌ಮನ್‌ಗಳು ತಮ್ಮ ನ್ಯಾಯವಾದ ಬೇಡಿಕೆಗಳಿಗೆ ನಡೆಸುವ ಹೋರಾಟಕ್ಕೂ, ಬಾಗಲಕೋಟೆಯ ಸ್ಪಿನ್ನಿಂಗ್ ಮಿಲ್ ಕಾರ್ಮಿಕರ ಹೋರಾಟಕ್ಕೂ ಸಮಿತಿಯು ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.

ರಾಜ್ಯದ ಮುಖ್ಯಮಂತ್ರಿಯವರು ಕನ್ನಡದ ಬದಲಾಗಿ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಮಾಡಬೇಕೆಂಬ ಸಲಹೆಯನ್ನು ಸಮಿತಿಯು ತೀವ್ರವಾಗಿ ಖಂಡಿಸಿ, ಕನ್ನಡ ಅಭಿವೃದ್ಧಿಯ ದೃಷ್ಟಿಯಿಂದ ಕನ್ನಡವನ್ನೇ ಪ್ರಥಮ ಭಾಷೆಯಾಗಿಡಬೇಕೆಂದು ಅಭಿಪ್ರಾಯಪಟ್ಟಿದೆ.

ಸಮಿತಿಯ ಇತರ ನಿರ್ಣಯಗಳನ್ನು ಮುಂದೆಕೊಡಲಾಗುವುದು. 13ನೇ ತಾ. ಸಂಜೆ ಬಹಿರಂಗ ಸಭೆ ನಡೆಯಿತು. ಪಾರ್ಟಿಯ ಹಲವು ನಾಯಕರು ಭಾಷಣ ಮಾಡಿದರು. ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತಲ್ಲದೆ ಸಾಮಾನ್ಯ ಜನತೆಯಲ್ಲಿ ಉತ್ತಮ ಪರಿಣಾಮ ಬೀರಿದೆ.

(ವಿವರಗಳು ಮುಂದಿನ ಸಂಚಿಕೆಯಲ್ಲಿ)

ಕಾರ್ಮಿಕ ಮುಖಂಡರನ್ನು ಗಡೀಪಾರು ಮಾಡಲು
ಬಹುರಾಷ್ಟ್ರೀಯ ಸಂಸ್ಥೆಗಳ ಸಂಚು



ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣ ರಾವ್

ದೇಶದ ಬದಲಾದ ರಾಜಕೀಯ ಪರಿಸ್ಥಿತಿಯ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಕಳೆದೆರಡು ವರ್ಷಗಳಲ್ಲಿ ಕಾರ್ಮಿಕ ವರ್ಗದ ರಾಜಕೀಯ ಬೆಳೆಯುತ್ತಿದೆ. ಅದರಲ್ಲೂ ದುಡಿಯುವ ವರ್ಗದ ರಾಜಧಾನಿ ಬೆಂಗಳೂರಿನಲ್ಲಿ ವರ್ಗಹೋರಾಟದ ದೃಷ್ಟಿಕೋನವುಳ್ಳ ಸಿ. ಐ. ಟಿ. ಯು. ಪ್ರಭಾವ ಬೆಳೆಯುತ್ತಿದೆ. ಇದಕ್ಕೆ ಕಳೆದ ವರ್ಷ ಹಾಗೂ ಈ ವರ್ಷ ನಡೆದ ಮೇ ದಿನಾಚರಣೆಯ ಪ್ರದರ್ಶನಗಳೇ ಸಾಕ್ಷಿ. ಬಂಡವಾಳಶಾಹಿ ಪತ್ರಿಕೆಗಳು ಪ್ರಚಾರ ನೀಡದಿದ್ದರೂ ಮೇ ದಿನಾಚರಣೆಗೆ ಸೇರಿದ್ದ ಬೃಹತ್ ಕಾರ್ಮಿಕ ಸಮೂಹವನ್ನು ನೋಡಿ ಆಳುವವರ್ಗದವರಿಗೆ, ಅವರ ಪೋಷಕರಾದ ಬಹುರಾಷ್ಟ್ರೀಯ ಸಂಸ್ಥೆಗಳ ಯಜಮಾನರಿಗೆ ಹಾಗೂ ಯಜಮಾನ ಸಂಸ್ಕೃತಿಯ ಬೆಂಬಲಿಗರಾದ ಆರೆಸ್ಸೆಸ್‌ನವರಿಗೆ ಹೊಟ್ಟೆಯಲ್ಲಿ ತಳಮಳ ಉಂಟಾಗಿದೆ. ಬೆಂಗಳೂರು, ಬೆಳಗಾವಿಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿ, ಸರಕಾರದ ಉದಾರ ನೀತಿಯಿಂದ ದೇಶದ ಸಂಪತ್ತನ್ನು ಲೂಟಿ ಮಾಡುತ್ತಿರುವ ಬಹುರಾಷ್ಟ್ರೀಯ ಸಂಸ್ಥೆಗಳು ಕಾರ್ಮಿಕವರ್ಗಕ್ಕೆ ಸರಿಯಾದ ನೇತೃತ್ವವನ್ನು ಕೊಡುತ್ತಿರುವ ಸಿ. ಐ. ಟಿ. ಯು. ಮುಖಂಡರನ್ನು ಹಾಗೂ ಉಳಿದ ಕಾರ್ಮಿಕರ ಮುಂದಾಳುಗಳನ್ನು ಬಗ್ಗುಬಡಿಯಲು ನಾನಾ ತಂತ್ರಗಳನ್ನು ಉಪಯೋಗಿಸುತ್ತಿವೆ. ಅದರಲ್ಲಿ ಗಡೀಪಾರು ಮಾಡಿಸುವ ಪ್ರಯತ್ನಕ್ಕೆ ಸರಕಾರ, ಪೋಲೀಸ್ ಇಲಾಖೆ ಮತ್ತು ಆರೆಸ್ಸೆಸ್‌ನವರು ಸಕ್ರಿಯವಾಗಿ ಸಹಾಯ ಮಾಡುತ್ತಿದ್ದಾರೆ.

ನಗರದಲ್ಲಿ ಕಾರ್ಮಿಕ ಅಶಾಂತಿ ಹಬ್ಬುವುದಕ್ಕೆ ಕಾರ್ಮಿಕ ಮುಖಂಡರೇ ಕಾರಣವೆಂದು ಸರಕಾರ, ಪೋಲೀಸು, ಆಡಳಿತವರ್ಗ ಮತ್ತು ಆರೆಸ್ಸೆಸ್ ಮುಖಂಡರುಗಳು ನೀಡುತ್ತಿರುವ ಹೇಳಿಕೆಗಳ ಹಿನ್ನಲೆಯಲ್ಲಿ ಮೈಕೋ, ಐ.ಟಿ.ಸಿ. ಮತ್ತು ಬೆಳಗಾಂ ಇಂಡಾಲ್ ಕಾರ್ಖಾನೆಗಳಲ್ಲಿರುವ ವಾಸ್ತವಿಕ ಪರಿಸ್ಥಿತಿಯನ್ನು ಗಮನಿಸಬೇಕು.

ಮೈಕೋ :

ದೀರ್ಘಕಾಲದ ನೋವಿನ ಹೋರಾಟದ ನಂತರ ಮುಷ್ಕರ ಕಾಲದ ಸಂಬಳದೊಂದಿಗೆ ಕೆಲಸಕ್ಕೆ ಹೋದ ಕಾರ್ಮಿಕರು ತಾ. 14-4-80ರಂದು ಆಡಳಿತವರ್ಗಕ್ಕೆ ತಮ್ಮ ಉಳಿದ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿದರು. ಬೇಡಿಕೆಗಳಲ್ಲಿ ಕಾರ್ಖಾನೆಗೆ ಹೋಗಿ ಬರಲು ಸಾರಿಗೆ ವ್ಯವಸ್ಥೆ, ನಿವೃತ್ತಿ ವೇತನ, ವಿದ್ಯಾಭ್ಯಾಸಕ್ಕೆ ಆರ್ಥಿಕ ಸಹಾಯ, ವೇತನ ಏರಿಕೆ, ವೈದ್ಯಕೀಯ ಸೌಲಭ್ಯ ಮುಂತಾದ ಬೇಡಿಕೆಗಳನ್ನು ಮುಂದಿಡಲಾಗಿದೆ.

(ಕಡೇ ಪುಟ ನೋಡಿ)

ಪುಸ್ತಕ ಪರಿಚಯ

ನಮ್ಮನ್ನಾವರಿಸಿಕೊಳ್ಳುವ ವಿಶಿಷ್ಟ ಅನುಭವ

ಬಿ. ಆರ್.

ಕಾಡಿನಲ್ಲಿ ಬೆಳದಿಂಗಳು : ಪ್ರಧಾನ ಸಂಪಾದಕ : ನಿರಂಜನ, ಅನುವಾದ : ಸಿ. ಪಿ. ರವಿಕುಮಾರ್. ಆಫ್ರಿಕದ ಹಾಡು : ಪ್ರಧಾನ ಸಂಪಾದಕ : ನಿರಂಜನ, ಅನುವಾದ : ಸಿ. ಸೀತಾರಾಂ. ಎರಡೂ ಪುಸ್ತಕಗಳ ಪ್ರಕಾಶಕರು : ನವಕರ್ನಾಟಕಪಬ್ಲಿಕೇಷನ್ಸ್ (ಪ್ರೈ) ಲಿ. ಕೆಂಪೇಗೌಡ ವೃತ್ತ, ಬೆಂಗಳೂರು.

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿ. ಅವರು 'ವಿಶ್ವಕಥಾಕೋಶ'ದ ಯೋಜನೆಯಡಿಯಲ್ಲಿ ಇದೀಗ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ವಿಶ್ವದ ವಿವಿಧ ಭಾಷೆಗಳ ಕತೆಗಳಲ್ಲಿ ಪ್ರಾತಿನಿಧಿಕವೆನ್ನಿಸಬಹುದಾದವನ್ನು ಆಯ್ದು ಒಂದೆಡೆ ಕಲೆಹಾಕುವ ಕೆಲಸ ಕಷ್ಟಕರವಾದದ್ದು. ಅಧ್ಯಯನ, ಆಯ್ಕೆಯ ನಿಖರತೆ ಮತ್ತು ಅವುಗಳ ಪ್ರಕಟಣೆಯ ಸಾಹಸ-ಎಲ್ಲವೂ ಕಷ್ಟಸಾಧ್ಯ ವಿಚಾರಗಳಾದ್ದರಿಂದ ಮೇಲ್ನೋಟಕ್ಕೇ ಸಂಪಾದಕ ಮಂಡಲಿ ಮತ್ತು ಪ್ರಕಾಶಕರನ್ನು ಪ್ರಶಂಸಿಸಬೇಕಾದ ಕೆಲಸ ಇದಾಗಿದೆ. 'ನವಕರ್ನಾಟಕ' ಎಂದಾಗ ಮತ್ತು ಪ್ರಧಾನ ಸಂಪಾದಕರು ನಿರಂಜನ ಎಂದಾಗ ವಿಶ್ವದ ಪ್ರಗತಿಪರ ಕತೆಗಳ ಕೋಶ ಇದಾಗಿರಬಹುದೆಂಬ ಭಾವನೆಯೂ ನನಗಿತ್ತು. ಹಾಗೆ ಮಾಡುವುದರಿಂದ ವೈವಿಧ್ಯಕ್ಕೆ ಬದಲಾಗಿ, ಪ್ರಾತಿನಿಧಿಕವೆಂಬ ಮಾನದಂಡಕ್ಕೆ ಹೊರತಾಗಿ ನಿರ್ದಿಷ್ಟ ವಿಚಾರದ ಎಳೆಯಲ್ಲಿ ಹುಟ್ಟಿಹಬ್ಬಿದ ಕತೆಗಳ ಸಮೂಹ ನಮ್ಮ ಸಂವೇದನೆಯ ಕಕ್ಷೆಗೆ ಬರುತ್ತಿತ್ತು. ಇಲ್ಲಿ ಆ ರೀತಿ ಆಗಿಲ್ಲ ಎಂಬುದಕ್ಕೆ ಪ್ರಧಾನ ಸಂಪಾದಕರ ಈ ಮಾತು ನಿದರ್ಶನ : "ಪ್ರತಿಯೊಂದು ಸಂಪುಟದಲ್ಲೂ ಸಮಗ್ರ ರಸಾನುಭವ ಸಾಧ್ಯವಾಗುವಂತೆ ಎಚ್ಚರ. ಸಂಪುಟಗಳ ಸರಣಿಯನ್ನು ನಿಶ್ಚಯಿಸುವಾಗಲೂ ವೈವಿಧ್ಯಕ್ಕೆ ಪ್ರಾಶಸ್ತ್ಯ"-ಇದು ಸಂಪಾದಕರ ಆಶಯ. ಇದನ್ನು ಆಧರಿಸಿ ಹೇಳುವುದಾದರೆ ಸಾಹಿತ್ಯ ಕ್ಷೇತ್ರದಲ್ಲಿ ಇದೊಂದು ಮಹತ್ವದ ಕೆಲಸ. ಜನಪರ ಹೋರಾಟದಲ್ಲಿ ಸಾಂಸ್ಕೃತಿಕ ಕ್ಷೇತ್ರದ ಸಾರ್ಥಕ್ಯವನ್ನು ಕಾಣುವ ಧೋರಣೆಗೆ ಈ ಆಶಯ ಅಷ್ಟೇನೂ ಹಿಡಿಸದಿರಬಹುದು. ಸಂಪಾದಕರು ಮತ್ತು ಪ್ರಕಾಶಕರು ಜನತೆಯ-ಶೋಷಿತ ಜನತೆಯ ಹೋರಾಟದಲ್ಲಿ ನಂಬಿಕೆಯುಳ್ಳವರಾದ್ದರಿಂದ ಈ ಮಾತು ಹೇಳಬೇಕಾಗಿದೆ. ಅದೇನೇ ಇರಲಿ ಈ ಪ್ರಯತ್ನ ಕನ್ನಡ ಸಾಹಿತ್ಯ ಮತ್ತು ಪ್ರಕಾಶನ ಪ್ರಪಂಚದಲ್ಲಿ ಪ್ರಶಂಸಾರ್ಹ ಹೆಜ್ಜೆ.

ಈಗ ಪ್ರಕಟವಾಗಿರುವ ಸಂಪುಟಗಳಲ್ಲಿ ಕೆಲವಂತೂ ವಿಶಿಷ್ಟ ಲೋಕವನ್ನೇ ತೆರೆಯುತ್ತವೆ. ಉದಾಹರಣೆಗೆ 'ಕಾಡಿನಲ್ಲಿ ಬೆಳದಿಂಗಳು'ವಿನಲ್ಲಿ ಸಂಕಲಿತವಾದ ವಿಯಟ್ನಾಂ ಕತೆಗಳು. ಇಲ್ಲಿ ಯಾರೇ ಸಂಕಲಿಸಿದರೂ ಇಂಥದೇ ಕತೆಗಳು ಇರಲಿಕ್ಕೆ ಸಾಧ್ಯವೆಂಬಂತೆ ಆ ಜನತೆಯ ಅನುಭವ ದ್ರವ್ಯವೇ ವಿಶಿಷ್ಟವಾಗಿದೆ. ಪ್ರಧಾನ ಸಂಪಾದಕರು ಪ್ರಸ್ತಾವನೆಯಲ್ಲಿ ಕೊಟ್ಟಿರುವ ವಿವರಗಳಷ್ಟೇ ಸಾಕು. ಅವರಿವರ ಅಧಿಕಾರದಡಿಯಲ್ಲಿ ವಿಯೆಟ್ನಾಂ ಜನತೆ ಇದ್ದ ಸ್ಥಿತಿಯ ಅರಿವಿಗೆ. ಇಂಥ ಜನತೆ ನಿರಂತರವಾಗಿ ತಮ್ಮನ್ನು ಹಂಗಿನಲ್ಲಿಟ್ಟು ಹಲ್ಲೆ ನಡೆಸುತ್ತಿದ್ದ ಶಕ್ತಿಗಳ ವಿರುದ್ಧ-ವಿಶೇಷವಾಗಿ ಅಮೇರಿಕನ್ ದಾಳಿಯ ವಿರುದ್ಧ-ದಿನಬೆಳಗಾದರೆ ಸೆಣೆಸುತ್ತ ಬಂದವರು. 'ವಯಸ್ಸಿನ ಅಂತರವನ್ನು ಗಮನಿಸದೆ. ಹೆಣ್ಣು ಗಂಡು ಭೇದವಿಲ್ಲದೆ, ಜನ ಒಂದಾಗಿ ವಸಾಹತುಗಾರ ಹಾಗೂ ಸಾಮ್ರಾಜ್ಯವಾದಿಗಳಿಂದ ತಮ್ಮ ರಾಷ್ಟ್ರವನ್ನು ಬಂಧಮುಕ್ತಗೊಳಿಸಿ, ನವಸಮಾಜವನ್ನು ನಿರ್ಮಿಸುತ್ತಿರುವುದು ಮಹಾಕಾವ್ಯಕ್ಕೆ ಯೋಗ್ಯವಾದ ವಸ್ತು'ಎಂಬ ಪ್ರಧಾನ ಸಂಪಾದಕರ ಮಾತು ಉತ್ಪ್ರೇಕ್ಷಿತವೇನಲ್ಲ; ಮಹಾಕಾವ್ಯಕ್ಕಲ್ಲದಿದ್ದರೂ ಮಹಾಕಾದಂಬರಿಗಂತೂ ಅದು ಅತ್ಯಂತ ಯೋಗ್ಯವಸ್ತು.

'ಕಾಡಿನಲ್ಲಿ ಬೆಳದಿಂಗಳು' ಕೃತಿಯನ್ನು ಓದುತ್ತಾ ಹೋದಂತೆ ಅದು ನಮ್ಮನ್ನು ಒಳಗೊಳ್ಳುವ ರೀತಿಯೇ ವಿಶಿಷ್ಟವಾದದ್ದು. ಅಲ್ಲಿನ ಅನುಭವ ಲೋಕ ಕನ್ನಡ ಓದುಗನಿಗೆ ತೀರಾ ಅಪರಿಚಿತವಾದದ್ದು. ಗಂಡು ಹೆಣ್ಣೆನ್ನದೆ, ವಯಸ್ಸಿನ ಮಟ್ಟ ಗಮನಿಸದೆ ಸದಾ ಸ್ವರಕ್ಷಣೆ ಮತ್ತು ಹೋರಾಟಗಳ ದಿಕ್ಕಿನಲ್ಲಿ ಕ್ರಿಯಾಶೀಲವಾಗಿದ್ದ ಧೀರಬದುಕು ಮತ್ತು ಅಲ್ಲಿ ಏಳುವ ಬೀಳುವ ಮಾನವೀಯ ಸಂಬಂಧಗಳ ಮಿಡಿತ-ಇದು ಒಟ್ಟಾರೆ ಎಲ್ಲ ಕತೆಗಳ ವಸ್ತು. ಈ ಕತೆಗಳು ನೇರ ನಿರೂಪಣಾ ವಿಧಾನದಲ್ಲಿವೆ. ಸುತ್ತು ಬಳಸಿಲ್ಲ; ಸಂಕೇತಗಳಿಲ್ಲ; ತಾಂತ್ರಿಕ ಕಸರತ್ತಿಲ್ಲ. ಅಲ್ಲಲ್ಲೆ ಬಳಕೆಯಾಗುವ ತಂತ್ರಗಳೂ ಭಾರವಾಗದೆ ಕತೆಯಲ್ಲಿ ಅವಿಭಾಜ್ಯತೆ ಪಡೆಯುವ ರೀತಿ ಅನುಭವ ದ್ರವ್ಯಕ್ಕೆ ದಕ್ಕಿದ ತೀವ್ರತೆಗೆ ಸಾಕ್ಷಿಯಾಗಿದೆ. ಎಲ್ಲೂ ಕೇವಲ ಯುದ್ಧದ ಕತೆಗಳು ಮಾತ್ರವಾಗಿ ಬಂದೂಕುಗಳ,ಬಾಂಬುಗಳ ಸದ್ದುಗದ್ದಲದಲ್ಲಿ ಮನುಷ್ಯನನ್ನೇ ಮರೆಯುವ ಕತೆಗಳಲ್ಲ ಇವು; ಬಂದೂಕು ಬಾಂಬುಗಳ ಸಿಡಿತವನ್ನು ಸೀಳಿಕೊಂಡು ಮನುಷ್ಯ, ಮನಸ್ಸು, ಮಾನವೀಯ ಸಂಬಂಧಗಳ ಶೋಧನೆಗೆ ತೊಡಗುವ ಕತೆಗಳು; ಗಾಢವಾಗುತ್ತಿದ್ದ ಮಾನವೀಯ ಸಂಬಂಧಗಳು ಬಾಂಬಿನ ಸಿಡಿತದಲ್ಲಿ, ಸ್ಫೋಟಗೊಳ್ಳುವ ಬೆಳಕಿನಲ್ಲಿ ಮಸಳಾಗುವ, ಮುರುಟಿ ಹೋಗುವ ಆ ಮುಖಾಂತರ ಆಳವಾದ ನೋವನ್ನು ನಮ್ಮಲ್ಲಿ ನೆಡುವ ಕತೆಗಳು.

ಮೊದಲನೇ ಕತೆ 'ಕಾಡಿನಲ್ಲಿ ಬೆಳದಿಂಗಳು' ಕೂಡು ಬರುವ ಆಳವಾದ ಪ್ರೇಮ ಮತ್ತು ಯುದ್ಧಗಳ ನಡುವೆ ತುಡಿಯುವ ಜೀವಗಳ ಬದುಕನ್ನು ಕಾಣಬಹುದು. ಯೋಧನೊಬ್ಬ ನೆನಪಾಳದಿಂದ ಕತೆ ಹೇಳುವ ತಂತ್ರ ಇದರಲ್ಲಿದೆ. ಅದು ಚೆನ್ನಾಗಿಯೂ ಮೂಡಿಬಂದಿದೆ. ಆತ ಊರು ಬಿಟ್ಟು ಎಷ್ಟೋ ವರ್ಷಗಳಾಗಿವೆ. ಈತನನ್ನು ಸ್ವತಃ ನೋಡದೆ ಅವನ ಅಕ್ಕನಿಂದ ವಿಷಯ ತಿಳಿದುಕೊಂಡು ವಿವಾಹವಾಗಲು ಕಾದ ಮುಗ್ಧ, ಆದರೆ ಧೀರ ಹೆಣ್ಣಿನ ಕತೆಯನ್ನಾತ ಹೇಳುತ್ತಾನೆ ತಾನು ಊರಿಗೆ ಹೊರಟಾಗ ತನ್ನ ಟ್ರಕ್ಕಿನಲ್ಲೇ ಆಕೆ ಪ್ರಯಾಣ ಮಾಡಿದರೂ ಪತ್ತೆಹಚ್ಚಲಾಗದೆ ಮನೆ ಸೇರುತ್ತಾನೆ ಬಾಂಬ್ ದಾಳಿಯಿಂದ ಸೇತುವೆಗಳ ಸಂರಕ್ಷಣೆ ಕಾರ್ಯದಲ್ಲಿ ನಿರತಳಾಗಿದ್ದ ನೈಟ್‌ಳ ಪ್ರೇಮಕತೆ ಇದು. ಕಡೆವರೆಗೂ ಈತನಿಗಾಗಿ ಕಾದ ಅವಳ ಪ್ರೇಮದ ಜೊತೆಜೊತೆಗೆ ಹೋರಾಟದ ಬದುಕೂ ಒಂದಾಗಿ ಬೆಸೆಯುವುದೇ ಈ ಕತೆಯ ಮಹತ್ವ. ಇದು ಪ್ರೇಮದ ಕತೆಯಾದರೆ ದಂತದ ಹಣಿಗೆ, ತಾಯಿಕರುಳು ಮತ್ತು ಮಗ-ಕತೆಗಳು ಮಾನವೀಯ ಸಂಬಂಧದ ಮತ್ತೊಂದು ಮಗ್ಗುಲನ್ನು ತೆರೆಯುತ್ತವೆ. ಈ ಸಂಬಂಧಗಳ ಸೆಳೆತ ಅನುಭವಕ್ಕೆ ಬರುವುದು ಹೋರಾಟದ ಒಂದು ಭಾಗವಾಗಿ ತನ್ನದಲ್ಲದ ಮಗುವನ್ನು ಸಾಕಿದ, ಮತ್ತು ಸಾಕಲು ಬೇರೆಡೆಯಲ್ಲಿ ಬಿಟ್ಟು ಬಂದ ಲೈ ಕಡೆಗೆ ಅವನನ್ನು ಕಳೆದುಕೊಳ್ಳುವ ದಾರುಣ ಸಂದರ್ಭದಿಂದ ಕತೆ ಕೊನೆಗೊಳ್ಳುತ್ತದೆ. ತನ್ನದೇ ಮಗುವೆಂದು ಬೇರೊಬ್ಬಳು ಅದನ್ನು ಕರೆದೊಯ್ಯುತ್ತಾಳೆ. ಆದರೆ ಆ ಮಗು ಅವಳದಲ್ಲ.ಹೀಗೆ ಲೈ ಮತ್ತು ಅದನ್ನು ಮನೆಯಲ್ಲಿಟ್ಟು ಸಾಕಿದ್ದವರ ಮನಸ್ಸು ಗಾಢ ನೋವಿನಲ್ಲಿ ಹೆಪ್ಪುಗಟ್ಟಿ ನಮ್ಮನ್ನೂ ಆವರಿಸಿಕೊಳ್ಳುತ್ತದೆ. 'ಮಗ' ಕತೆಯಲ್ಲಿ ಅಮೇರಿಕಾ ಕೈಗೊಂಬೆಗಳ ಸೈನಕ್ಕೆ ಮಗನನ್ನು ಒಪ್ಪಿಸುವ ಬದಲು ವಿಮೋಚನಾ ಸೇನೆಗೆ ಸೇರಿಸುವ ಘಟನೆ ಸ್ವಾತಂತ್ರ್ಯಾಪೇಕ್ಷೆ ಮತ್ತು ಮಮತೆಗಳ ಬಿಕ್ಕಟ್ಟಿನಲ್ಲಿ ಒಡಮೂಡಿದೆ. 'ದಂತದ ಹಣಿಗೆ' ಕತೆ ಇನ್ನೊಂದು ರೀತಿಯದು ಹೋರಾಟದಲ್ಲಿ ಮಗ್ನವಾಗಿದ್ದ ತಂದೆ ಮನೆಗೆ ಬಂದಾಗ 'ಅಪ್ಪ' ಎಂದು ಕರೆಯದೆ ಹಟ ಮಾಡಿದ ಮಗಳು ಬೀಳ್ಕೊಡಿಗೆಯ ಸಂದರ್ಭದಲ್ಲಿ'ಅಪ್ಪಾ'ಎಂದದ್ದು, ಆತ ದಂತದ ಬಾಚಣಿಗೆ ತರುವುದಾಗಿ ಮಾತು ಕೊಟ್ಟು ಯುದ್ಧವಾತಾವರಣದ ನಡುವೆಯೂ ಆನೆಯ ದಂತವನ್ನು ಪತ್ತೆಹಚ್ಚಿ ಬಾಚಣಿಗೆ ಮಾಡುವುದು, ಕಡೆಗೆ ತಾನು ಸತ್ತು ಹೋದರೂ ಬಾಚಣಿಗೆಯನ್ನು ಸ್ನೇಹಿತನಿಗೆ ಕೊಟ್ಟು ಮಗಳಿಗೆ ತಲುಪಿಸುವಂತೆ ಹೇಳುವುದು, ಸ್ನೇಹಿತ ಮತ್ತು ಆತನ ಮಗಳ ಅನಿರೀಕ್ಷಿತ ಭೇಟಿ-ಮುಂತಾದ ಘಟನೆಗಳಿಂದ ಗಾಢವಾಗುವ ಕತೆ ಇದು.

ಈ ಎಲ್ಲ ಕತೆಗಳು ಮಾನವೀಯ ಸಂಬಂಧದ ಸೆಳೆತಗಳನ್ನು ದಾಖಲಿಸುತ್ತಿದ್ದರೂ ಎಲ್ಲೂ ಹೋರಾಟ ಗೌಣವಾಗುವುದಿಲ್ಲ. ಇದು ಮಹತ್ವದ ಅಂಶ. ಹೋರಾಟ ಪ್ರಧಾನವಾಗಿದ್ದು ಅದರ ನಡುವೆ 'ಮನುಷ್ಯ'ನನ್ನು ಗುರುತಿಸಿಕೊಳ್ಳುವ ಎರಡನ್ನೂ ಒಂದಾಗಿ ಕಾಣುವ ದೃಷ್ಟಿಕೋನ ಇಲ್ಲಿದೆ. ಇಂಥ ಕತೆಗಳ ಜೊತೆಗೆ 'ಫ್ರೆಂಚರ ವಸಾಹತುವಾಗಿದ್ದ ಕಾಲದ 'ಕ್ರೀಡಾ ಪ್ರೇಮ'ವೆಂಬ ವಿಡಂಬನಾತ್ಮಕ ಕತೆಯೂ ಇದೆ. ಈ ಸಂಕಲನದಲ್ಲೂ ನಿಸರ್ಗ ಚಿತ್ರಣವಿದೆ; ವಿವಿಧ ಸನ್ನಿವೇಶಗಳ ನಿರೂಪಣೆಯಿದೆ. ಆದರೆ ಅವೆಲ್ಲ ವಸ್ತು ಕೇಂದ್ರಕ್ಕೆ ದುಡಿಯುವ ಸಾಮಗ್ರಿಗಳು. ನಿಸರ್ಗದ ಚಿತ್ರಣದ ಒಂದು ತುಣುಕು ಹೀಗಿದೆ:

"ಒಂದು ಕಂದಕದ ಬಳಿ ಅವಳು ನಿಂತಳು. ಪಕ್ಕದಲ್ಲಿದ್ದ ಬತ್ತದ ಪೈರು ಗಾಳಿ ಬೀಸಿದಾಗ ತೊನೆದಾಡುತ್ತಿತ್ತು. ಅವಳತ್ತ ಧಾವಿಸುತ್ತಿರುವ ಅಲೆಗಳಂತೆ ತೋರುತ್ತಿತ್ತು. ಅವಳ ಹಿಂಬದಿಯಲ್ಲಿ ಎತ್ತರದ ತೆಂಗಿನ ಮರಗಳು. ವಿಷಾಕ್ತ ರಸಾಯನ ದ್ರವ್ಯಗಳ ಪ್ರೇಕ್ಷಣೆಯಿಂದ ತೆಂಗಿನಗರಿಗಳಲ್ಲಿ ಎಲೆಗಳೇ ಇಲ್ಲ. ರಾಕ್ಷಸಾಕಾರದ ಮೀನುಗಳ ಅಸ್ಥಿಪಂಜರಗಳನ್ನು ಗಾಳಿಯಲ್ಲಿ ನೇತುಹಾಕಿದಂತೆ ಅನಿಸುತ್ತಿತ್ತು ಮೇಲ್ಮುಖವಾಗಿ ಎದ್ದು ನಿಂತ ಗರಿಗಳ ಸಮೂಹವು ಮುಗಿಲ ಕಡೆ ಮೊಗ ಚಾಚಿ ಸೆಟೆದು ನಿಂತ ನಗ್ನವಾದ ಖಡ್ಗಗಳ ರಾಶಿಯೆಂಬಂತೆ ತೋರಿದವು."

ಇಲ್ಲಿ ಬರುವ ನಿಸರ್ಗದ ಚಿತ್ರಣ ಬೆಳೆಯುತ್ತ ಹೋರಾಟದ ಮಧ್ಯೆ ಅದ ಒಂದು ಅನುಭವದ ಭಾಗವಾಗುತ್ತದೆ. ಇದು ಕತೆಗಳ ಸ್ವರೂಪಕ್ಕೆ ಒಂದು ಸಾಕ್ಷಿ. ಅನುವಾದದ ಬಗ್ಗೆ ಹೇಳುವುದಾದರೆ ಒಟ್ಟಾರೆ ದೃಷ್ಟಿಯಿಂದ ಸಂಪಹನಶೀಲವಾಗಿದೆ. ಕೆಲವು ಕಡೆ ಮಸ್ತಿಷ್ಕ, ವಿಷಾಕ್ತ, ಮುಂತಾದ ಪದಪುಂಜಗಳ ಬಳಕೆ ಅನುವಾದ ಎಂಬುದನ್ನು ಜ್ಞಾಪಿಸಿಕೊಡುತ್ತದೆ.

ವಿಶ್ವಕಥಾಕೋಶದ ಇನ್ನೊಂದು ಸಂಪುಟ 'ಆಫ್ರಿಕದ ಹಾಡು' ಇದೂ ವಿಶಿಷ್ಟವಾದ ವಸ್ತು ವಿನ್ಯಾಸದ ಕಥಾ ಸಂಕಲನವೇ ಆಗಿದೆ. ಇದರಲ್ಲಿ ಕಪ್ಪು ಜನರ ಬದುಕಿನ ಕಪ್ಪುಗೆರೆಗಳಿವೆ; ಮುಸ್ಲಿಮರ ಜೀವನದ ಮಗ್ಗಲುಗಳಿವೆ; ಅಮಾನವೀಯತೆಗೆ ಸಿಕ್ಕಿ ನೊರಗಿದ ಜೀವಗಳ ಅಪ್ರಕಟಿತ ಆಕ್ರಂದನವಿದೆ. ಆದರೆ ವಿಯಟ್ನಾಂ ಕತೆಗಳಷ್ಟು ಗಾಢವಾಗುವ ಶಕ್ತಿ ಕೆಲವು ಕತೆಗಳಿಗಿಲ್ಲ. ಮೊದಲ ಕತೆ 'ಆಫ್ರಿಕದ ಹಾಡು' ತನ್ನ ತಂತ್ರ ಮತ್ತು ಅದರಲ್ಲಿ ಹಿಡಿದಿಡುವ ಮನಸ್ಸಿನ ಏರಿಳಿತಗಳ ವಿಧಾನದಿಂದ ನಮ್ಮನ್ನು ಒಳಗುಮಾಡಿಕೊಳ್ಳುವ ಒಂದು ಉತ್ತಮ ಕತೆ. ರಹದಾರಿಯಿಲ್ಲದವನೊಬ್ಬ, ಆಫ್ರಿಕದ ಹಾಡು ಹೇಳುತ್ತಿದ್ದ ಸಭಾಂಗಣದಲ್ಲಿ ನಿಂತಿದ್ದು ಪೋಲೀಸರ ಕೈಗೆ ಸಿಕ್ಕಿಬೀಳುವ ಭಯಗ್ರಸ್ತ ಸ್ಥಿತಿಯಲ್ಲಿ ಪಡುವ ತಳಮಳದ ಚಿತ್ರ ಈ ಕತೆಯಲ್ಲಿದೆ ಈ ಕತೆಯ ವಿಶಿಷ್ಟತೆ ಇರುವುದು ಈ ಕಾರಣಕ್ಕೆ ಮಾತ್ರ ಅಲ್ಲ. ಈ ಸಂದರ್ಭದಲ್ಲಿ ಅವನ ಮನಸ್ಸಿನಲ್ಲಿ ಹಾದು ಹೋಗುವ ವಿವಿಧ ಶ್ರಮಿಕ ಚಿತ್ರಗಳು ಇಡೀ ಕತೆಗೆ ಹೊಸ ಆಯಾಮ ಒದಗಿಸುತ್ತವೆ. ಪೋಲೀಸರು ಹತ್ತಿರಕ್ಕೆ ಬರುತ್ತಿರುವ ದೃಶ್ಯದಲ್ಲೇ ಹೊಮ್ಮುವ ಈತನ ಭಾವನೆಗಳು, ನೆನಪುಗಳು ಕತೆಯ ಮುಖ್ಯಭಾಗವಾಗುವುದರಲ್ಲಿ ಅದರ ಮಹತ್ವವಿದೆ.

'ಮೊಗಸಾಲೆಯಲ್ಲಿ ಅತಿಥಿ' ಮತ್ತೊಂದು ಯಶಸ್ವೀ ಕತೆ. ಅನಿರೀಕ್ಷಿತವಾಗಿ ಕರಿಯ ಕಲಾವಿದನೊಬ್ಬನಿಗೆ ಬಹುಮಾನ ಬರುತ್ತದೆ. ಆತನ ಕಲಾಕೃತಿಯನ್ನು ಅಂಗಡಿಯೊಂದರಲ್ಲಿ ಪ್ರದರ್ಶನಕ್ಕಿಡಲಾಗಿದ್ದು ಅದನ್ನು ದಿನವೂ ನೋಡುತ್ತಿದ್ದ ಬಿಳಿಯನೊಬ್ಬ ಈ ಕಲಾವಿದನನ್ನು-ಕಲಾವಿದ ಎಂದು ಗೊತ್ತಿಲ್ಲದಿದ್ದರೂ ಕರಿಯನೆಂಬ ಕಾರಣಕ್ಕಾಗಿಯೇ-ಆತಿಥ್ಯಕ್ಕೆ ಕರೆದೊಯ್ಯುತ್ತಾನೆ. ದೇಶವನ್ನೆ ಆವರಿಸಿದ ದಮನಕಾರಿ ವಾತಾವರಣದಲ್ಲಿ ಕರಿಯನೊಬ್ಬನಿಗೆ ಸಿಕ್ಕುವ ಈ ಆತಿಥ್ಯಕ್ಕೆ ತನ್ನದೇ ಆದ ವ್ಯಾಪಕತೆಯಿದೆ; ನಗರವನ್ನು ರಾತ್ರಿ ಹನ್ನೊಂದು ಗಂಟೆಗೆ ಬಿಡಬೇಕು, ಕೆಲವು ಶಬ್ದಪ್ರಯೋಗಗಳೂ ನಿಷಿದ್ಧ-ಇಂಥ ಅಮಾನವೀಯ ಸಂದರ್ಭದಲ್ಲಿ ಬಿಳಿಯನ ಆತಿಥ್ಯದಲ್ಲಿ ಕರಿಯ ಕಲಾವಿದ ಪಡೆಯುವ ಅನುಭವ ಮಾನವೀಯವಾದದ್ದು. ವರ್ಣದ್ವೇಷದ ಕ್ರೌರ್ಯದ ಅನುಭವವನ್ನು ತಂದುಕೊಡುತ್ತಲೇ ಮಾನವೀಯ ಬದುಕಿನ ಆಶಯವನ್ನು ಧ್ವನಿಸುವ ರೀತಿ ಕರಿಯನ ಅನುಭವ ದ್ರವ್ಯದ ಮೂಲಕ ಮಂಡಿತವಾಗಿರುವುದರಿಂದ ವಿಶಿಷ್ಟವಾಗಿದೆ. ಹಸಿದ ಹುಡುಗ,ಸೇಡಿನ ಸಾಲಗಾರ ದಂಥ ಕತೆಗಳ ರೀತಿ ಇನ್ನೊಂದು ಬಗೆಯದು. ಹಸಿದ ಹುಡುಗ ಮನುಷ್ಯ ಸಂಬಂಧಗಳು ಮತ್ತು ಹಸಿವಿನ ದಾರುಣ ಸ್ಥಿತಿಯ ದಾಖಲೆ. ಹಸಿವಿನಿಂದ ಕದಿಯುವ ಕೆಲಸಕ್ಕೆ ಕೈ ಹಾಕುವ ಒತ್ತಡದ ಸೂಕ್ಷ್ಮವನ್ನು ಅಭಿವ್ಯಕ್ತಿಸುವ ಒಂದು ಪ್ರಯತ್ನವಾಗಿ ಈ ಕತೆ ಬಂದರೂ ವಿವರಗಳನ್ನು ಹಿಂಜುವ ವಿಧಾನದಲ್ಲಿ ಸಾಂದ್ರಗೊಳ್ಳದೆ ಕತೆ ಸೊರಗುತ್ತದೆ. 'ಸೇಡಿನ ಸಾಲಗಾರ' ಕತೆಯಲ್ಲಿ ಉಚಿತ ಶಿಕ್ಷಣಕ್ಕೆ ವ್ಯಕ್ತವಾದ ವಿರೋಧವನ್ನು ಕೇಂದ್ರವಾಗಿಟ್ಟುಕೊಂಡು ಅಧಿಕಾರಶಾಹಿಯ ಸೂಕ್ಷ್ಮಕ್ರೌರ್ಯವನ್ನು ಬಯಲಿಗೆಳೆಯಲಾಗಿದೆ. ಮಕ್ಕಳಿಗೆ ಉಚಿತ ಶಿಕ್ಷಣ ಕೊಡುವುದರಿಂದ ಕೆಳವರ್ಗದ ಮಕ್ಕಳು ಮನೆಗೆಲಸ ಮುಂತಾದವುಗಳಿಗೆ ಸಿಕ್ಕುವುದಿಲ್ಲವೆಂಬಂಥ ಸಣ್ಣ ವಿಚಾರಗಳು ಆ ಕ್ರಮದ ವಿರೋಧದಲ್ಲಿ ಪರ್ಯವಸಾನವಾಗುತ್ತದೆ. ವೇರೊ ಎಂಬ ಕೆಲಸದ ಹುಡುಗಿ ಸರ್ಕಾರದ ಕಾರ್ಯದರ್ಶಿಯೊಬ್ಬನ ಮನೆಯಲ್ಲಿ ಕೆಲಸಕ್ಕಿದ್ದು ಅಲ್ಲಿಂದ ಹೊರದೂಡಲ್ಪಟ್ಟ ಮೇಲೆ ನಿಧಾನವಾಗಿ ಅವಳ ತಾಯಿಯಲ್ಲಿ ಬಂಡಾಯದ ದನಿಯೇಳುತ್ತದೆ. ಈ ಪ್ರಕ್ರಿಯೆ ತೀವ್ರತೆಯ

(7ನೇ ಪುಟ ನೋಡಿ)

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಮುಂದುವರಿದ ವ್ಯರ್ಥ ಸಾಹಸಗಳು

ಇರಾನ್‌ನಿಂದ ಒತ್ತೆಯಾಳುಗಳನ್ನು ರಕ್ಷಿಸುವ ವಿಫಲ ಕಾರ್ಯಾಚರಣೆಯು ಅಮೇರಿಕನ್ ಸಾಮ್ರಾಜ್ಯಶಾಹಿ ಶಾಂತಿ, ಸ್ವಾತಂತ್ರ್ಯ, ಪ್ರಜಾಸತ್ತೆ, ಮತ್ತು ಸಮಾಜವಾದವನ್ನು ತರಲು ಹೋರಾಡುತ್ತಿರುವ ಶಕ್ತಿಗಳ ವಿರುದ್ಧ ನಡೆಸಿದ ವ್ಯರ್ಥ ಪ್ರಯತ್ನಗಳ ಮುಂದುವರಿಕೆಯಾಗಿದೆ. ಇರಾನ್ ವಿರುದ್ಧ ಮಿಲಿಟರಿ ಕ್ರಮ ಕೈಗೊಳ್ಳುವುದಕ್ಕೆ ಅಮೇರಿಕಾದ ಆಳುವ ವರ್ಗದ ಮಧ್ಯದಲ್ಲೇ ಭಿನ್ನಾಭಿಪ್ರಾಯಗಳು ಇರುವುದನ್ನು ಸೈರಸ್ ವ್ಯಾನ್ಸ್ ರಾಜೀನಾಮೆ ಸ್ಪಷ್ಟಪಡಿಸಿದೆ.

ಇರಾನ್‌ನಲ್ಲಿ ಷಾರವರ ಪತನಕ್ಕೆ ಮೊದಲು ಅಥವಾ ಅಫ್‌ಘನ್ ಕ್ರಾಂತಿಯ ಮೊದಲು ಎಣ್ಣೆ ಉತ್ಪಾದಿಸುವ ದೇಶಗಳು ಎಣ್ಣೆಯನ್ನು ತಮ್ಮ ಉಪಯೋಗಕ್ಕೆ ಬಳಸಿಕೊಳ್ಳುವ ಅವರ ಹಕ್ಕನ್ನು ಮುಂದಿಟ್ಟಾಗ, 1974ರಲ್ಲಿ ಹಾಗೂ ನಂತರ ಎಣ್ಣೆಯ ರಫ್ತುಗಾರರು ಕೈಗಾರಿಕಾ ದೇಶಗಳಿಗೆ ಅಂದರೆ ಸಾಮ್ರಾಜ್ಯಶಾಹಿಗಳಿಗೆ ನಷ್ಟ ಉಂಟು ಮಾಡಿದರೆ ತೈಲ ಪ್ರದೇಶವನ್ನು ಬಲವಂತವಾಗಿ ಆಕ್ರಮಿಸಲಾಗುವುದೆಂದು ಎಚ್ಚರಿಕೆ ನೀಡಲಾಗಿತ್ತು.

ಶಸ್ತ್ರಾಸ್ತ್ರ ಪೈಪೋಟಿಯ ಮತ್ತೊಂದು ಹಂತ ಪ್ರಾರಂಭವಾಗುವುದೆಂದು ಅಮೇರಿಕ ಮಿತ್ರದರ ನ್ಯಾಟೋ ಸ್ನೇಹಿತರು ಎಚ್ಚರಿಸಿದರು. ಮಿಲಿಟರಿ ಆಯವ್ಯಯವನ್ನು ತೀವ್ರವಾಗಿ ಏರಿಸುವುದಕ್ಕೆ ನ್ಯಾಟೋ ಕೌನ್ಸಿಲ್ ನಿರ್ಧರಿಸಿತು. ಯುರೋಪಿನಲ್ಲಿ ಮಧ್ಯಮ ದರ್ಜೆಯ ಅಣು ಕ್ಷಿಪಣಿ ಸ್ಥಾವರಗಳನ್ನು ಸ್ಥಾಪಿಸಲು ಅಮೇರಿಕ ನಿರ್ಧರಿಸಿತು. ಇಷ್ಟೆಲ್ಲವನ್ನು ಸೋವಿಯತ್ ಮಿಲಿಟರಿ ಬಲಕ್ಕೆ ತನ್ನ ಬಲವನ್ನು ಸರಿದೂಗಿಸುವ ನೆಪದಲ್ಲಿ ಮಾಡಿತು. ಆದರೆ ಸೋವಿಯತ್ ಸೈನ್ಯದೊಂದಿಗೆ ಹೋಲಿಸಿದರೆ ತಾನು ಈಗಾಗಲೇ ಅಷ್ಟೇ ಶಕ್ತಿಶಾಲಿ ಸೈನ್ಯವನ್ನು ಆ ಪ್ರದೇಶದಲ್ಲಿ ಹೊಂದಿರುವುದಾಗಿ ಅಮೇರಿಕಾ ಈ ಮೊದಲೇ ಹೇಳಿಕೆಯನ್ನು ನೀಡಿತ್ತು.

ಅಮೇರಿಕನ್ ಸಾಮ್ರಾಜ್ಯಶಾಹಿಗಳು ತುಂಬಾ ದಿನಗಳಿಂದ ಇಸ್ರೇಲಿ ಆಕ್ರಮಣಕಾರರಿಗೆ ಶಸ್ತ್ರಾಸ್ತ್ರ ನೀಡಿ ಅರಬ್ ಜಗತ್ತಿನ ವಿರುದ್ಧ ಆಕ್ರಮಣ ಮಾಡಲು ಸಹಾಯ ಮಾಡುತ್ತಿದ್ದಾರೆ. ಒಂದು ವರ್ಷದ ಹಿಂದೆ ಈಜಿಪ್ಟಿನ ಸಾದತ್ ಕ್ಯಾಂಪ್ ಡೇವಿಡ್ ಒಪ್ಪಂದಕ್ಕೆ ಸಹಿ ಹಾಕುವಂತೆ ಮಾಡಿ ಇಸ್ರೇಲಿಗಳ ವಶಕ್ಕೆ ಈಜಿಪ್ಟನ್ನು ಒಪ್ಪಿಸಿತು

ಅಲ್ಲಿಂದ ಅಮೇರಿಕನ್ ಸಾಮ್ರಾಜ್ಯಶಾಹಿಗಳು ತಮ್ಮ ಬೆದರಿಕೆಗಳನ್ನು ಕಾರ್ಯಗತಗೊಳಿಸಲು ಪ್ರಾರಂಭಿಸಿದ್ದಾರೆ. ಪೂರ್ವ ಮೆಡಿಟೆರೇನಿಯನ್ ಮತ್ತು ಹಿಂದೂ ಮಹಾಸಾಗರದ ಪಶ್ಚಿಮದಲ್ಲಿ ಅಮೇರಿಕಾ ತನ್ನ ಮಿಲಿಟರಿ ನೆಲೆಗಳನ್ನು ಭದ್ರಗೊಳಿಸುತ್ತಿದೆ.

ಕ್ಯಾಂಪ್ ಡೇವಿಡ್ ಒಪ್ಪಂದವಾಗಿ ಒಂದು ವರ್ಷವಾದ ನಂತರ ಅದರ ವಿಫಲತೆ ಎದ್ದು ಕಾಣುತ್ತಿದೆ. ಕಳೆದ ತಿಂಗಳು ಕಾರ್ಟರ್‌ರವರು ಸಾದಾತ್ ಮತ್ತು ಬಿನಿನ್ ಜೊತೆ ನಡೆಸಿದ ಪ್ರತ್ಯೇಕ ಮಾತುಕತೆಗಳು ಪರಿಸ್ಥಿತಿಯಲ್ಲಿ ಯಾವ ಪ್ರಗತಿಯನ್ನೂ ತೋರಿಸಿಲ್ಲ. ಈ ಮಧ್ಯೆ ಆಕ್ರಮಿತ ಅರಬ್ ಪ್ರದೇಶದಲ್ಲಿ ಯಹೂದ್ಯರನ್ನು ನೆಲೆಸುವ ತನ್ನ ಕಾರ್ಯಕ್ರಮವನ್ನು ಇಸ್ರೇಲ್ ಮುಂದುವರಿಸಿತು. ಪ್ಯಾಲೆಸ್ಟೈನ್ ಜನತೆಗೆ ಪೌರಸ್ವಾಯತ್ತತೆಯನ್ನು ಮಾತ್ರ ನೀಡುವುದಾಗಿ ಇಸ್ರೇಲ್ ಹೇಳಿರುವುದು, ಆಕ್ರಮಿತ ಪ್ರದೇಶಗಳನ್ನು ಅದು ತನ್ನ ಗಡಿಭಾಗಗಳನ್ನಾಗಿ ಭಾವಿಸಿರುವುದನ್ನು ತೋರಿಸುತ್ತದೆ. ಇದರಿಂದ ಜೋರ್ಡಾನ್‌ನ ಪಶ್ಚಿಮ ದಂಡೆಯ ಸಮಸ್ಯೆಗಳನ್ನಾಗಲೀ ಇತರೆ ಸಮಸ್ಯೆಗಳನ್ನಾಗಲೀ ಬಗೆಹರಿಸುವ ದಾರಿಯಿಲ್ಲದಂತಾಗಿದೆ. ದಕ್ಷಿಣ ಲೆಬನಾನ್ ವಿರುದ್ಧ ಇಸ್ರೇಲ್ ಬಹಿರಂಗ ಆಕ್ರಮಣ ನಡೆಸಿದೆ. ಪ. ಏಷಿಯಾ ಸಮಸ್ಯೆಯ ಕೇಂದ್ರವಾದ ಪ್ರತ್ಯೇಕ ಪ್ಯಾಲೆಸ್ಟೈನ್ ದೇಶದ ಪ್ರಶ್ನೆಯಾಗಲೀ, ಪ್ಯಾಲೆಸ್ಟೈನ್ ವಿಮೋಚನಾ ಸಂಸ್ಥೆಗೆ ಮಾನ್ಯತೆ ನೀಡಿ, ಮಾತುಕತೆಗಳ ಮೂಲಕ ಸಮಸ್ಯೆಯನ್ನು ಪರಿಹರಿಸುವ ಪ್ರಶ್ನೆಯೂ ಇಲ್ಲ.

ಇರಾನ್ ಬೆಳವಣಿಗೆಗಳು :

ಇರಾನ್‌ನಲ್ಲಿ ಇತ್ತೀಚೆಗೆ ಆದ ಬೆಳವಣಿಗೆಗಳನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಎದುರಿಸಬೇಕಾಗಿದೆ. ಇರಾನ್ ಜನತೆಯ ವಿರುದ್ಧ ಕ್ರೂರ ಅತ್ಯಾಚಾರಗಳನ್ನು ಎಸಗಿದ ಷಾನನ್ನು ವಿಚಾರಣೆಗಾಗಿ ಬಿಟ್ಟುಕೊಡಲು ಅಮೇರಿಕಾ ತಿರಸ್ಕರಿಸಿದ ಕಾರಣ ಟೆಹರಾನ್‌ನಲ್ಲಿ ಕಳೆದ ನವೆಂಬರ್ 4ರಂದು ಅಮೇರಿಕನ್ ದೂತಾವಾಸದ ಸಿಬ್ಬಂದಿಗಳನ್ನು ಒತ್ತೆಯಾಳುಗಳನ್ನಾಗಿ ಮಾಡಲಾಯಿತು. ಇವರಲ್ಲಿ ಕೆಲವರು ಸಿ. ಐ. ಎ. ಏಜೆಂಟರು. ಇದರಿಂದಾಗಿ ಸಿಟ್ಟಿಗೆದ್ದ ಸಾಮ್ರಾಜ್ಯಶಾಹಿ ಅಮೇರಿಕಾ ಇರಾನ್ ವಿರುದ್ಧ ಆರ್ಥಿಕ ದಿಗ್ಬಂಧನ ಹೇರುವುದಕ್ಕೆ, ಬಂದರುಗಳನ್ನು ಕೊರೆಯುವುದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದೆಯಲ್ಲದೆ ಇನ್ನು ಪಶ್ಚಿಮ ಯುರೋಪು ಮಿತ್ರರಾಷ್ಟ್ರಗಳ ಮೂಲಕ ಹಾಗೂ ಜಪಾನ್ ಮೂಲಕ ಆರ್ಥಿಕ ಒತ್ತಡ ತರಲು ಯತ್ನಿಸುತ್ತಿದೆ ಆದರೆ ಇವೆಲ್ಲಾ ರಾಷ್ಟ್ರಗಳು ಎಣ್ಣೆಗಾಗಿ ಇರಾನ್ ದೇಶವನ್ನೇ ಅವಲಂಬಿಸಿರುವುದರಿಂದ ಅಮೇರಿಕಾದ ಮಾತು ಕೇಳಲು ಹಿಂಜರಿಯುತ್ತಿವೆ.

ಇದೇ ವರ್ಷ ಜನವರಿಯಲ್ಲಿ ಅಮೇರಿಕ ಅಧಿಕೃತವಾಗಿ ಪರ್ಷಿಯನ್ ಕೊಲ್ಲಿ ಪ್ರದೇಶ ಹಾಗೂ ಎರಡು ಮಹಾಸಾಗರಗಳು ಆವರಿಸಿರುವ ಸಾವಿರಾರು ಮೈಲಿಗಳು "ನಮ್ಮ ಅತಿ ಮಹತ್ವದ ಪ್ರದೇಶ" ಎಂದು ಸಾರಿದೆ. ಮತ್ತೊಂದು ಇರಾನ್ ಹುಟ್ಟುವುದನ್ನು ಅಮೇರಿಕ ಸಹಿಸುವುದಿಲ್ಲವೆಂದು ಸಾರ್ವಜನಿಕ ಹೇಳಿಕೆಗಳನ್ನು ಹೇಳಿದೆ. "ಪರಿಮಿತ ಅಣುಯುದ್ಧ"ದ ಬಗ್ಗೆ ಕಾರ್ಯಕ್ರಮವನ್ನು ತಯಾರಿಸಲು ಪೆಂಟಗಾನ್‌ಗೆ ಆದೇಶ ನೀಡಲಾಗಿದೆ. ಕಾರ್ಯಕ್ರಮದಲ್ಲಿ ಆಯ್ಕೆ ಮಾಡಿದ ಅಣು ಸಾಧನಗಳನ್ನು ಶತ್ರುಗಳ ಮಿಲಿಟರಿ ಕೇಂದ್ರಗಳ ಮೇಲೆ ಉಪಯೋಗಿಸುವ ಯೋಜನೆಯಿದೆ. ಪರ್ಷಿಯನ್ ಕೊಲ್ಲಿ ಪ್ರದೇಶದಲ್ಲಿ ಹಾಗೂ ಹಿಂದೂ ಮಹಾಸಾಗರದ ಪಶ್ಚಿಮ ಭಾಗದಲ್ಲಿ ಶಸ್ತ್ರಾಸ್ತ್ರ ಸಜ್ಜಿತವಾದ ಯುದ್ಧನೌಕೆಗಳನ್ನು ಪೂರ್ವ ಸಿದ್ಧತೆಯಾಗಿ ನಿಲ್ಲಿಸಲಾಗಿದೆ. ಡಿಯಾಗೋ ಗಾರ್ಷಿಯಾದ ತನ್ನ ಹಳೆಯ ನೆಲೆಯನ್ನು ಅಣ್ವಸ್ತ್ರೀಕರಣದಿಂದ ವಿಶಾಲಗೊಳಿಸಿದೆ. ಕೀನ್ಯಾ, ಒಮಾನ್‌ಗಳಲ್ಲಿ ಹೊಸ ನೆಲೆಗಳನ್ನು ಸ್ಥಾಪಿಸಲಾಗಿದೆ. ಸೋಮಾಲಿಯಾದ ಬರ್ಬೆರಾದಲ್ಲಿ ಮತ್ತೊಂದು ನೆಲೆಯನ್ನು ಸ್ಥಾಪಿಸಲು ಅಮೇರಿಕಾ ಮಾತುಕತೆ ನಡೆಸುತ್ತಿದೆ.

ಅಫ್‌ಘಾನಿಸ್ಥಾನದ ವಿರುದ್ಧ ಸಂಚು :

ಇರಾನ್ ಮತ್ತು ಮಧ್ಯಪ್ರಾಚ್ಯದ ಬೆಳವಣಿಗೆಗಳಿಂದಾಗಿ ಅಮೇರಿಕಾ ಅಫ್‌ಘಾನಿಸ್ಥಾನದ ಜನತಾ ಪ್ರಜಾಪ್ರಭುತ್ವ ಸರಕಾರವನ್ನು ಉರುಳಿಸಿ, ತನ್ನ ಕೈಗೊಂಬೆ ಸರಕಾರವನ್ನು ಸ್ಥಾಪಿಸುವ ಪ್ರಯತ್ನಗಳನ್ನು ಮತ್ತಷ್ಟು ಬಲಗೊಳಿಸಿದೆ. "ಅಫ್‌ಘನ್ ನಿರಾಶ್ರಿತರು" ಎಂದು ಹೇಳಲ್ಪಡುವ ವ್ಯಕ್ತಿಗಳನ್ನು ಪಾಕಿಸ್ತಾನದಲ್ಲಿ ಶಸ್ತ್ರಾಸ್ತ್ರ ತರಬೇತಿ ನೀಡಿ, ಅಫ್‌ಘಾನಿಸ್ಥಾನವನ್ನು ಆಕ್ರಮಿಸಲು ಆದೇಶ ನೀಡಿ ಗಡಿಭಾಗಗಳಲ್ಲಿ ಬಿಡಲಾಗುತ್ತಿದೆ ಇಂತಹ ಶಕ್ತಿಗಳಿಗೆ ತರಬೇತಿ ತಾನೂ ನೀಡುತ್ತಿರುವುದಾಗಿ ಸಾದಾತ್ ಹೇಳಿಕೊಂಡಿದ್ದಾರೆ. ಇದು ಅಮೇರಿಕನ್ ಸಾಮ್ರಾಜ್ಯಶಾಹಿಗಳಿಂದ ಪ್ರೇರಿತ, ಪ್ರೋತ್ಸಾಹಿಸಲ್ಪಟ್ಟ ಶುದ್ಧ ಸರಳ ಆಕ್ರಮಣ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆಕ್ರಮಣಕಾರರನ್ನು ಹೊಡೆದೋಡಿಸಲು ಅಫ್‌ಘನ್ ಮುಖಂಡರು ಸೋವಿಯತ್ ನಾಯಕರಿಗೆ ಮಾಡಿದ ಮನವಿಗೆ ಉತ್ತರವಾಗಿ ರವಾನ್ಯಾದ ಸಣ್ಣದೊಂದು ಸೈನ್ಯ ಸಹಾಯಕ್ಕಾಗಿ ಅಲ್ಲಿದೆ.

ಇದರಿಂದ ವ್ಯಗ್ರಗೊಂಡ ಅಮೇರಿಕಾ ರಷ್ಯಕ್ಕೆ ಆಹಾರಧಾನ್ಯ ಮತ್ತಿತರ ವಸ್ತುಗಳ ರಫ್ತನ್ನು ನಿಲ್ಲಿಸಿರುವುದಲ್ಲದೆ, ಮಾಸ್ಕೋ ಒಲಿಂಪಿಕ್ಸ್ ಕ್ರೀಡೆಗಳನ್ನು ಬಹಿಷ್ಕರಿಸುವುದಾಗಿ ಹೇಳಿದೆ, ಪಾಕಿಸ್ತಾನಕ್ಕೆ ಅಪಾರ ಶಸ್ತ್ರಾಸ್ತ್ರ ನೆರವು ನೀಡುವ ಭರವಸೆ ನೀಡಿದೆ. ಇರಾನ್‌ನಲ್ಲಿ ಪೆಟ್ಟುತಿಂದು ಓಡಿದ ನಂತರ ಈಗ ತನ್ನ ಸಾಹಸವಾದಿ ಕಾರ್ಯಾಚರಣೆಗೆ ಪಾಕಿಸ್ತಾನವನ್ನು ಉಪಯೋಗಿಸಿಕೊಳ್ಳಲು ಅದು ನಿರ್ಧರಿಸಿದೆ. ಪಾಕಿಸ್ತಾನ ಸಹಾ ಚದುರಂಗದ ಕಾಯಿ ಆಗಲು ಸಿದ್ಧವಾಗಿದೆ. ಇತ್ತೀಚಿನ ಇಸ್ಲಾಮಿಕ್ ದೇಶಗಳ ವಿದೇಶಾಂಗ ಮಂತ್ರಿಗಳ ಸಮ್ಮೇಳನದಲ್ಲಿ ಮನಬಂದಂತೆ ಹೇಳಿಕೆಗಳನ್ನು ನೀಡಲಾಗಿದೆ. ಸಮ್ಮೇಳನ ಅಫ್‌ಘಾನಿಸ್ಥಾನದೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಹಾಕಿದೆ. ಸಿಮ್ಲಾ ಒಪ್ಪಂದವನ್ನು ಉಲ್ಲಂಘಿಸಿ ಜಿಯಾ-ಉಲ್-ಹಕ್‌ರವರು ಕಾಶ್ಮೀರದ ಸಮಸ್ಯೆಯನ್ನು ಸಮ್ಮೇಳನದಲ್ಲಿ ಪ್ರಸ್ತಾಪಿಸಿದರು. ಆ ಮೂಲಕ ಅಫ್‌ಘಾನಿಸ್ತಾನದ ವಿರುದ್ಧ ಆಕ್ರಮಣಕ್ಕೆ ನೆಲೆಯಾಗುವುದಕ್ಕೆ ಹಾಗೂ ಅಮೇರಿಕಾ ಹೇಳಿದಂತೆ ಭಾರತದ ಮೇಲೆ ಒತ್ತಡ ತರಲು, ಬ್ಲಾಕ್‌ಮೇಲ್ ಮಾಡಲು ಪಾಕಿಸ್ತಾನ ಸಿದ್ಧವಿದೆ ಎಂಬುದು ಸ್ಪಷ್ಟವಾಗಿದೆ. ಅಮೇರಿಕಾ-ಪಾಕಿಸ್ತಾನಗಳು ಈ ಸಂದರ್ಭದಲ್ಲಿ ಮಿಲಿಟರಿ ನೆರವಿನ ಪ್ರಮಾಣದ ಬಗ್ಗೆ ಮಾತ್ರ ಮಾತುಕತೆ ನಡೆಸುತ್ತಿದ್ದವು.

ಸರ್ವಾಧಿಕಾರಿಯ ನಿರೀಕ್ಷೆ :

ಆದರೆ ಪಾಕಿಸ್ತಾನದ ಮಿಲಿಟರಿ ಕೂಟ ಈಗಾಗಲೇ ಕಷ್ಟದಲ್ಲಿದೆ. ಎಲ್ಲಾ ಪ್ರಜಾಸತ್ತಾತ್ಮಕ, ಮೂಲಭೂತ ಹಕ್ಕುಗಳ ದಮನ, ಭುಟ್ಟೋರವರನ್ನು ಗಲ್ಲಿಗೇರಿಸಿದ್ದು, ರಾಜಕೀಯ ಮುಖಂಡರ ಬಂಧನ, ಸಣ್ಣ, ಪುಟ್ಟ ಅಪರಾಧಗಳಿಗೂ ನೀಡುವ ಕ್ರೂರ ಅಮಾನವೀಯ ಶಿಕ್ಷೆಗಳು ಮಿಲಿಟರಿ ಕೂಟಗಳು ಜನತೆಯಿಂದ ಪ್ರತ್ಯೇಕಿಸಲ್ಪಟ್ಟಿದ್ದಾರೆ.

ಭುಟ್ಟೋರವರನ್ನು ಗಲ್ಲಿಗೇರಿಸಿದ ವಾರ್ಷಿಕೋತ್ಸವದ ದಿನ ಪಾಕಿಸ್ತಾನದಾದ್ಯಂತ ನಡೆದ ಗಲಭೆಗಳು ಜನರ ಅತೃಪ್ತಿಯನ್ನು ಬಹಿರಂಗಪಡಿಸಿವೆ.

ಇದರಿಂದ ಮಿಲಿಟರಿ ಕೂಟ ಹೊಸ ತಂತ್ರಗಳನ್ನು ಅನುಸರಿಸಿ ನುಸರತ್, ಬೇನಜೀರ್ ಭುಟ್ಟೋ ಮತ್ತು ಅಸ್ಘರ್ ಖಾನ್ ಮುತ್ತಿತರರನ್ನು ಬಿಡುಗಡೆ ಮಾಡಿದೆ. ವಿರೋಧ ಪಕ್ಷಗಳು ಆಡಳಿತೆಯ ವಿರುದ್ಧ ಮಾಡುತ್ತಿರುವ ಟೀಕೆಗಳು ಜನಗಳಿಂದ ಒಳ್ಳೆಯ ಪ್ರತಿಕ್ರಿಯೆ ಪಡೆಯುತ್ತಿವೆ. ಇದರೊಂದಿಗೆ ಬಲೂಚಿಗಳು, ಸಿಂಧಿಗಳು ಮಿಲಿಟರಿ ಕೂಟದ ವಿರುದ್ಧ ಬಂಡಾಯ ಏಳುವ ಸೂಚನೆಗಳಿವೆ, ಪಂಜಾಬೀಗಳೇ ಹೆಚ್ಚಾಗಿರುವ ಆಡಳಿತದ ವಿರುದ್ಧ ದಂಗೆಯ ಭಾವನೆಗಳು ಬೆಳೆಯುತ್ತಿವೆ. ಪಾಕಿಸ್ತಾನ ಸೈನ್ಯದ ಮುಖ್ಯಾಧಿಕಾರಿಗಳಲ್ಲಿ ಪರಸ್ಪರ ಅಧಿಕಾರ ಹಂಚಿಕೊಳ್ಳುವುದಕ್ಕೆ ನಡೆಯುತ್ತಿರುವ ಕಿತ್ತಾಟಗಳು ಜಿಯಾ-ಉಲ್-ಹಕ್‌ರವರ ತಲೆನೋವನ್ನು ಹೆಚ್ಚಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಪಾಕಿಸ್ತಾನವನ್ನು ಅಮೇರಿಕಾದವರಿಗೆ ನೆರವನ್ನು ಒತ್ತೆ ಇಡುವುದಕ್ಕೆ ಅಥವಾ ಒಂದು ಆಶ್ರಿತ ರಾಜ್ಯವನ್ನಾಗಿ ಮಾಡುವುದಕ್ಕೆ ಸಾಧ್ಯವಿಲ್ಲವೆಂಬುದು ಮಿಲಿಟರಿ ಸರ್ವಾಧಿಕಾರಿಗಳಿಗೆ ಈಗ ಗೊತ್ತಾಗುತ್ತಿದೆ.

ರಾಷ್ಟ್ರೀಯ ಅಸೆಂಬ್ಲಿಯ ರಚನೆಯಾದರೂ ಬಾಂಗ್ಲಾ ದೇಶದ ಪರಿಸ್ಥಿತಿ ಕೂಡಾ ಅಭದ್ರವಾಗಿದೆ. ಪ್ರಜಾಸತ್ತೆಯ ದಮನಕಾರ್ಯ ಮುಂದುವರಿದಿದೆ. ಇತ್ತೀಚೆಗಷ್ಟೇ ಅನೇಕ ವಿರೋಧ ಪಕ್ಷಗಳ ಮುಖಂಡರನ್ನು ಅದರಲ್ಲೂ ಕಮ್ಯುನಿಸ್ಟರನ್ನು ಬಂಧಿಸಿ, ಸೆರೆಗೆ ಹಾಕಲಾಗಿದೆ. ಅಧ್ಯಕ್ಷ ಜಿಯಾ-ಉರ್-ರೆಹಮಾನ್‌ರವರ ಬಾಂಗ್ಲಾದೇಶ್ ರಾಷ್ಟ್ರೀಯ ಪಕ್ಷ ಒಡೆದು ಎರಡು ಹೋಳಾಗಿದೆ. ಬೆಲೆಗಳು ನಂಬಲಾರದಷ್ಟು ಗಗನಕ್ಕೆ ಏರಿವೆ, ಇದರಿಂದ ದೇಶದ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆ. ಈ ವರ್ಷ ಭೀಕರ ಬರಗಾಲವನ್ನು ಜನತೆ ಎದುರು ನೋಡುತ್ತಿದೆ. ಜಿಯಾ-ಉರ್-ರೆಹಮಾನ್‌ರವರೇ ಹೇಳುವಂತೆ ಅವರು "ಜ್ವಾಲಾಮುಖಿಯ ಶಿಖರದ ಮೇಲೆ" ಕುಳಿತಿದ್ದಾರೆ.

ನೇಪಾಳದಲ್ಲಿ ವಿದ್ಯಾರ್ಥಿಗಳು, ವಿವಿಧ ಕ್ಷೇತ್ರಗಳ ಕಾರ್ಮಿಕರು ದೊರೆ ಬೀರೇಂದ್ರರ ವಿರುದ್ಧ ದಂಗೆ ಎದ್ದಿದ್ದಾರೆ. ಜನಗಳ ಒತ್ತಾಯಕ್ಕೆ ಮಣಿದು ಜನಾಭಿಪ್ರಾಯ ಸಂಗ್ರಹಕ್ಕೆ ಸರಕಾರ ಆಜ್ಞೆ ಮಾಡಿದೆ. ಅನೇಕ ದಶಕಗಳಿಂದ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ, ಮೂಲಭೂತ ಹಕ್ಕುಗಳನ್ನು ನಿರಾಕರಿಸುವ ನೇಪಾಳ ಸರಕಾರ ರಾಜಕೀಯ ಪಕ್ಷಗಳನ್ನು ಬಹಿಷ್ಕರಿಸಿತ್ತು. ಮೇ 2ರಿಂದ ಪ್ರಾರಂಭವಾಗುವ [illegible]

(6ನೇ ಪುಟ ನೋಡಿ)

ಈಶಾನ್ಯ ಪ್ರದೇಶದ ಸಮಸ್ಯೆಗಳಿಗೆ ರಾಜಕೀಯ ಉತ್ತರ

—ಇ. ಎಂ. ಎಸ್. ನಂಬೂದಿರಿಪಾದ್

ಕಾಂಗ್ರೆಸ್ (ಐ)ನ ಮೇಲಿನ ನಾಯಕರೆಲ್ಲ, ಕೇಂದ್ರದಲ್ಲಿ ಯಾವ ಪಕ್ಷ ಆಳುತ್ತಿದೆಯೋ ಅದೇ ರಾಜ್ಯಗಳಲ್ಲೂ ಆಡಳಿತ ನಡೆಸಬೇಕು ಎಂದು ಏರುಗಂಟಲಿನಲ್ಲಿ ಕೂಗುತ್ತಿರುವಾಗಲೇ- ಏಪ್ರಿಲ್ 20 ರಂದು ಸ್ಟೀಫನ್ ಕೊಚ್ಚಿನ್‌ನಲ್ಲಿ ಇದನ್ನು ಪುನರುಚ್ಚರಿಸಿದ್ದಾರೆ-ಈಶಾನ್ಯ ಪ್ರದೇಶದ ರಾಜ್ಯಗಳು "ಬಲಿಷ್ಠ ಕೇಂದ್ರ"ದ ಮಾತು ಅಲ್ಲಿ ನಡೆಯುವುದಿಲ್ಲವೆಂಬುದನ್ನು ಸೂಚಿಸಿರುವುದು ಚರಿತ್ರೆಯ ವರದಿಯಾಗಿದೆ.

ಪ್ರಧಾನ ಮಂತ್ರಿಯು ಅವರ ಸರ್ಕಾರದ ಆಶಯಗಳನ್ನು ಸ್ಪಷ್ಟಪಡಿಸಿದ್ದಾರೆ. ಅಸ್ಸಾಂನಲ್ಲಿ ಸಾಧಿಸಬೇಕಾಗಿರುವುದು ಮಿಲಿಟರಿ ಪರಿಹಾರವಲ್ಲ- ರಾಜಕೀಯ ಪರಿಹಾರ, ವಿರೋಧ ಪಕ್ಷಗಳು, ಆಂದೋಳನ ನಡೆಸುತ್ತಿರುವ ವಿದ್ಯಾರ್ಥಿಗಳು ಮತ್ತು ಅಸ್ಸಾಮಿನ ಇತರ ಜನತೆ ಕೇಳುತ್ತಿರುವುದು ಇದನ್ನೇ.

ಆದರೆ ಈ ನೀತಿ ಅಸ್ಸಾಂನಲ್ಲಿ ನಡೆಯುವುದಿಲ್ಲವೆಂಬ ಪರಿಸ್ಥಿತಿಗೆ ಕೇಂದ್ರ ಸರ್ಕಾರ ಮುಟ್ಟಿದೆ. ಆದ್ದರಿಂದಲೇ ಅದು ಶಾಂತಿ ಕೆಟ್ಟಿರುವ ವಲಯ ಎಂದು ಕಾನೂನನ್ನು ಜಾರಿ ಮಾಡಿತು. ಆದರೆ ಇದನ್ನು ಮುಖ್ಯ ನ್ಯಾಯಾಲಯ ತಡೆದಿದೆ. ಆದ್ದರಿಂದ ಇತರ "ದೃಢ" ಕ್ರಮಗಳಾದ ಸ್ಥಾನಬದ್ಧತೆಯ ಪ್ರಯೋಗ, ಕರ್ಫ್ಯೂಜಾರಿ, ಎಣ್ಣೆ ಕೇಂದ್ರಗಳ ಮುಂದೆ ಪಿಕೆಟ್ ಮಾಡುವವರನ್ನು ಬಲಪ್ರಯೋಗದಿಂದ ಬಂಧಿಸುವುದು ಇತ್ಯಾದಿಗಳನ್ನು ಕೈಗೊಳ್ಳಲಾಗಿದೆ.

ಇದೆಲ್ಲ ಇಚ್ಛಿತ ಪರಿಣಾಮ ಬೀರುವುದೇ ಎಂಬುದನ್ನು ಕಾದುನೋಡಬೇಕಾಗಿದೆ. ಜಾರಿಗೊಳಿಸಿದ್ದ ಕರ್ಫ್ಯೂವನ್ನು ಕೆಲವೇ ಗಂಟೆಗಳಲ್ಲಿ ಹಿಂತೆಗೆದುಕೊಳ್ಳಲಾಯಿತು. ಇದರಿಂದ "ಬಲಿಷ್ಠ" ಸರ್ಕಾರ ತಾನು ಹೇಳಿಕೊಳ್ಳುವಷ್ಟು ಬಲಿಷ್ಠವಲ್ಲ ಎಂಬುದು ಸೂಚಿತವಾಯಿತು.

ಕಾಂಗ್ರೆಸ್ (ಐ)ನ ಹೆಮ್ಮೆಗೆ ಭಂಗ ತರುವಂಥ ವಿಷಯ ಇಡೀ ದೇಶಕ್ಕೇ ದುರಂತದ ವಿಷಯವಾಗಿದೆ. ಏಕೆಂದರೆ ಕಳೆದ ಹಲವು ವಾರಗಳಲ್ಲಿ ಅಸ್ಸಾಂನಿಂದ ಭಾರತದ ಇತರ ಭಾಗಗಳಿಗೆ ತೈಲ ಸರಬರಾಜು ನಿಂತಿದ್ದು ಇಡೀ ದೇಶದ ಆರ್ಥಿಕತೆಗೆ ಅದರಿಂದ ವಿಪರೀತ ಧಕ್ಕೆ ಉಂಟಾಗಿದೆ. ಇದರಿಂದ ಭಾರತದ ಇತರ ಭಾಗಗಳಿಂದ ಅಸ್ಸಾಂಗೆ ಮಾತ್ರವಲ್ಲದೆ, ಅಸ್ಸಾಂ ಮೂಲಕವೇ ದೇಶದೊಡನೆ ಸಂಪರ್ಕ ಹೊಂದಿರುವ ಇತರ ರಾಜ್ಯಗಳಿಗೆ ಸರಬರಾಜು ಆಗುವುದಕ್ಕೆ ತೊಡಕಾಗಿದೆ.

ವ್ಯಪದೇಶದ ಆರ್ಥಿಕತೆಗೆ ಆದ ಈ [illegible] ಅಪಾಯಕರವಾದದ್ದಂ [illegible] ಹಾನಿ. ಈ ಪ್ರದೇಶದ ವಿವಿಧ ಗುಂಪುಗಳು ಅವುಗಳ ನಡುವೆ ಮತ್ತು ಇಡೀ ದೇಶದ ನಡುವೆ ಬೆಳೆಯುತ್ತಿರುವ ಬಿಕ್ಕಟ್ಟು ತುಂಬ ಅಪಾಯಕರವಾದದ್ದು. ಏಕೆಂದರೆ, ಈ ಪ್ರದೇಶದ ವಿವಿಧ ಗುಂಪುಗಳು ಮತ್ತು ಸರ್ಕಾರ ಮತ್ತು ಇಡೀ ದೇಶದ ಜನತೆಯ ನಡುವೆ ಪ್ರಜಾಪ್ರಭುತ್ವವಾದಿ ರೀತಿಯಲ್ಲಿ ಪರಸ್ಪರ ಹೊಂದಾಣಿಕೆ ಬರದಿದ್ದರೆ ಅದು ಇಡೀ ದೇಶದ ಐಕ್ಯತೆಯನ್ನೇ ಹಾಳು ಮಾಡುತ್ತದೆ. ದುರಾದೃಷ್ಟದಿಂದ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ (ಐ) ಮತ್ತು ಕೆಲವು ವಿರೋಧ ಪಕ್ಷಗಳು ಈ ಸಮಸ್ಯೆಯನ್ನು ಪರಿಹರಿಸುವುದಕ್ಕಿಂತ ಹೆಚ್ಚಿಸುವಂಥ ನಿಲುವುಗಳನ್ನು ತಾಳಿವೆ.

ಭಾರತದ ಇತರ ರಾಜ್ಯಗಳಿಗಿಂತ ಅಸ್ಸಾಂ ಮತ್ತು ಈಶಾನ್ಯ ವಲಯದ ಇತರ ರಾಜ್ಯಗಳನ್ನು ಬೇರ್ಪಡಿಸುವ ಎರಡು ವಿಶಿಷ್ಟ ಅಂಶಗಳು ಇಲ್ಲಿವೆ:-

ಮೊದಲನೆಯದಾಗಿ, ಈ ಇಡೀ ಸೀಮೆಯಲ್ಲಿ ಬೆಟ್ಟಗಾಡಿನ ಬುಡಕಟ್ಟಿನವರು ಮತ್ತು ಬಯಲು ಸೀಮೆಯವರು ಅಪಾರ ಸಂಖ್ಯೆಯಲ್ಲಿ ಇದ್ದಾರೆ. ಅದರಲ್ಲೂ ಬಯಲು ಸೀಮೆಯವರೆಂದರೆ ಅಸ್ಸಾಮಿಗಳು ಮತ್ತು ಬಂಗಾಲಿಗಳು ಚರಿತ್ರೆಯ ಯಾವ ಘಟ್ಟದಲ್ಲೂ ಅವರ ನಡುವಿನ ಸಂಬಂಧ ಸೌಹಾರ್ದವಾಗಿಲ್ಲ.

ಎರಡನೆಯದಾಗಿ, ಮೊದಲಿನ ಐಕ್ಯ ಭಾರತವನ್ನು ಭಾರತ ಮತ್ತು ಪಾಕಿಸ್ತಾನಗಳಾಗಿ ವಿಂಗಡಿಸಿರುವುದರಿಂದ ಮತ್ತು ಪಾಕಿಸ್ತಾನವು ಮತ್ತೆ ಇಂದಿನ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳಾಗಿ ಒಡೆದಿರುವುದರಿಂದ ನೆರೆದೇಶವಾದ ಪೂರ್ವಪಾಕಿಸ್ತಾನದ ಜನತೆಗೆ ಎಂಥ ಕಷ್ಟಗಳು ಒದಗಿವೆಯೆಂದರೆ, ಪ. ಬಂಗಾಳ, ಅಸ್ಸಾಂ ಮತ್ತು ಇದರ ರಾಜ್ಯಗಳಿಗೆ ನಿರಾಶ್ರಿತರ ದಂಡೇ ಬರುತ್ತಿದೆ. ಈ ನಿರಾಶ್ರಿತರ ದಂಡಿನ ಮುಖ್ಯ ಭಾಗ ಪಶ್ಚಿಮ ಬಂಗಾಳದಲ್ಲಿ ವಸತಿ ಪಡೆದಿದೆ. ಇದರಿಂದ ಆ ರಾಜ್ಯದ ಸರ್ಕಾರ ಮತ್ತು ಜನತೆ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅಸ್ಸಾಂ ಮತ್ತಿತರ ಪ್ರದೇಶಗಳಲ್ಲಿ ಬೆಳೆದ ಹಾಗೆ ಈ ನಿರಾಶ್ರಿತರು ಭಾಷಾ ಮತ್ತು ಸಾಂಸ್ಕೃತಿಕ ಗೊಂದಲಗಳನ್ನು ತರಲಿಲ್ಲ. ಪಶ್ಚಿಮ ಬಂಗಾಳದ ಜನತೆಯು ಹಾಗಲ್ಲದೆ ಅಸ್ಸಾಂ ಮತ್ತಿತರ ರಾಜ್ಯಗಳ ಜನತೆ ಈ ನಿರಾಶ್ರಿತರನ್ನು ಹೊರಗಿನವರು ಎಂಬ ಭಾವನೆಯಿಂದ ಕಂಡರು. ಆದ್ದರಿಂದಲೇ "ವಿದೇಶಿ ಪ್ರಜೆ"ಗಳನ್ನು ಪತ್ತೆಹಚ್ಚಿ ಹೊರದೂಡಬೇಕೆಂಬ ಕೂಗು ಅಸ್ಸಾಂ ಮತ್ತಿತರ ರಾಜ್ಯಗಳಲ್ಲಿ ಎದ್ದಿರುವುದು.

ಈ ಪ್ರದೇಶದ ಬೆಟ್ಟಗಾಡು ಮತ್ತು ಬಯಲುಸೀಮೆಯ ಜನತೆ (ಪ. ಬಂಗಾಳದ ಜನತೆಯೂ ಸೇರಿ) ಇತಿಹಾಸದ ಅನೇಕ ವರ್ಗಗಳಿಂದಲೂ ಈ ನಿರಾಶ್ರಿತರ ಸಮಸ್ಯೆಯನ್ನು ಎದುರಿಸಿದ್ದಾರೆ. ಈ ಪ್ರದೇಶದಲ್ಲಿ ವಾಸಿಸುವ ಅನೇಕ ಗುಂಪುಗಳ ಸಂಬಂಧಗಳು ಇದರಿಂದ ಸಂಕೀರ್ಣಗೊಂಡಿವೆ. ಇದಕ್ಕಾಗಿ ಯಾವ ಪ್ರಾಮಾಣಿಕ ವ್ಯಕ್ತಿಯೂ ಅವರ ಬಗ್ಗೆ ತೋರಿಸದೆ ಇರಲಾರ. ಆದ್ದರಿಂದ ದೇಶದ ಐಕ್ಯತೆಯಲ್ಲಿ ಆಸಕ್ತಿಯುಳ್ಳ ಪ್ರತಿಯೊಂದು ಪಕ್ಷ, ಸಂಸ್ಥೆ ಮತ್ತು ವ್ಯಕ್ತಿಯೂ ಈ ಸಮಸ್ಯೆಯನ್ನು ಬಗೆಹರಿಸಬಲ್ಲ ಒಂದು ವಿಶಾಲ ಪ್ರಜಾಪ್ರಭುತ್ವವಾದಿ ಪರಿಹಾರವನ್ನು ರೂಪಿಸಲು ಪ್ರಯತ್ನಿಸಬೇಕು.

ಇದನ್ನು ಅಖಿಲ ಭಾರತ ಬೆಳವಣಿಗೆಗಳ ವಿಶಾಲ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಅಸ್ಸಾಂ ಮತ್ತಿತರ ಈಶಾನ್ಯ ವಲಯದ ರಾಜ್ಯಗಳು ಎದುರಿಸುತ್ತಿರುವ ಪ್ರಮಾಣದಲ್ಲಿ ಅಲ್ಲವಾದರೂ, ಇಡೀ ದೇಶವೇ ಈ ಸಮಸ್ಯೆಯನ್ನು ಎದುರಿಸುತ್ತಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಇದು ಎಂಥ ಸೂಕ್ಷ್ಮರೂಪ ತಳೆಯಿತೆಂದರೆ ಭಾರತವು ತನ್ನ ನೆರೆದೇಶವಾದ ಪಾಕಿಸ್ತಾನದೊಡನೆ ಎರಡು ಯುದ್ಧಗಳನ್ನು ಮಾಡಬೇಕಾಯಿತು. ದೇಶದ ಮಿಕ್ಕ ಭಾಗಗಳಲ್ಲೂ ಸಹ, ವಿವಿಧ ಭಾಷಾ ಸಾಂಸ್ಕೃತಿಕ ಗುಂಪುಗಳ ಐಕ್ಯತೆ, ಸೌಹಾರ್ದತೆಯ ಸಮಸ್ಯೆಗಳು, ಬುಡಕಟ್ಟು ಜನಾಂಗಗಳು, ಅಧಿಕೃತ ಭಾಷೆ, ಶಿಕ್ಷಣ ಮಾಧ್ಯಮಗಳ ರೂಪದಲ್ಲಿ, ಕೇಂದ್ರ-ರಾಜ್ಯ ಸಂಬಂಧಗಳ ರೂಪದಲ್ಲಿ ಕಾಣಿಸಿಕೊಂಡಿವೆ. ಭಾರತದ ರಾಜಕೀಯ ಮುಖ್ಯ ಲಕ್ಷಣಗಳಲ್ಲಿ ಒಂದೆಂದರೆ ಅದರಲ್ಲಿ ವಾಸಿಸುತ್ತಿರುವ ವಿವಿಧ ಭಾಷಾ ಸಾಂಸ್ಕೃತಿಕ ಗುಂಪುಗಳ ಐಕ್ಯತೆ, ಅವುಗಳ ವೈವಿಧ್ಯತೆಯನ್ನು ಆಚರಣೆಯಲ್ಲಿ ಗುರುತಿಸಿದಾಗಲೇ ಆ ಐಕ್ಯತೆಯನ್ನು ಕಾಪಾಡಿ ಬಲಪಡಿಸಬಹುದು.

ಈ ದೃಷ್ಟಿಕೋನದಿಂದಲೇ ದೇಶದ ಕಮ್ಯುನಿಸ್ಟ್ ಚಳುವಳಿಯು ಭಾರತದ ರಾಜಕೀಯವನ್ನು ಫೆಡರಲ್ ತತ್ವದ ಆಧಾರದ ಮೇಲೆ ವಿಶ್ಲೇಷಿಸಿದೆ. ಪಕ್ಷವು "ಆಡಳಿತ ವರ್ಗಗಳು ಸ್ವಾಯತ್ತತೆಯನ್ನು ನೀಡದೆ ಕೇಂದ್ರೀಕರಿಸುವುದನ್ನು ವಿರೋಧಿಸುತ್ತದೆ ಮತ್ತು ಎಲ್ಲ ವಿನಾಶಕಾರಿ ಛಿದ್ರಕಾರಿ ಚಳುವಳಿಗಳನ್ನು ವಿರೋಧಿಸುತ್ತದೆ" ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ ಘೋಷಿಸಿದೆ. ಪಕ್ಷವು "ದೇಶದಲ್ಲಿ ವಾಸಿಸುವ ವಿವಿಧ ರಾಷ್ಟ್ರೀಯತೆಗಳ ನಿಜವಾದ ಸಮಾನತೆ ಮತ್ತು ಸ್ವಾಯತ್ತತೆಯ ಆಧಾರದ ಮೇಲೆ ಭಾರತೀಯ ಒಕ್ಕೂಟದ ಐಕ್ಯತೆಯ ರಕ್ಷಣೆ ಮತ್ತು ಸುಧಾರಣೆಗಾಗಿ ದುಡಿಯುತ್ತದೆ. ಪ್ರಜಾಸತ್ತಾತ್ಮಕ ಚೌಕಟ್ಟನ್ನು ಬೆಳೆಸಲು ಶ್ರಮಿಸುತ್ತದೆ" ಎಂದೂ ಕಾರ್ಯಕ್ರಮ ಹೇಳಿದೆ.

"ಬುಡಕಟ್ಟುಗಳಿರುವ ಪ್ರದೇಶವಲ್ಲಿ ಅಥವಾ ವಿಶಿಷ್ಟ ಸಂಪ್ರದಾಯತೆಯನ್ನುಳ್ಳ ವಿಶಿಷ್ಟ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳಿರುವ ಪ್ರದೇಶಗಳಲ್ಲಿ ಪ್ರಾದೇಶಿಕ ಸ್ವಾಯತ್ತತೆ ಕೊಟ್ಟು ಆ ರಾಜ್ಯದಲ್ಲಿ ಪ್ರಾದೇಶಿಕ ಸರ್ಕಾರ ರಚಿಸಬೇಕು" ಎಂದು ಪಕ್ಷವು ಸಲಹೆ ಮಾಡುತ್ತದೆ. "ಈ ಪ್ರಾದೇಶಿಕ ಸ್ವಾಯತ್ತ ಪ್ರದೇಶಗಳಿಗೆ ಅವುಗಳ ಅಭಿವೃದ್ಧಿಗೆ ಪೂರ್ಣ ಸಹಾಯ ಮಾಡಬೇಕು."

ಈ ತತ್ವಗಳ ಆಧಾರದ ಮೇಲೆ ಮಾತ್ರ ಈಶಾನ್ಯ ವಲಯದ ವಿವಿಧ ಬೆಟ್ಟಗಾಡು ಮತ್ತು ಬಯಲುಸೀಮೆ ಜನತೆಯನ್ನು ಫೆಡರಲ್ ಚೌಕಟ್ಟಿನಲ್ಲಿ ಒಂದುಗೂಡಿಸಬಹುದು. ಇದು ಕಾಂಗ್ರೆಸ್ (ಐ) ನಾಯಕರು ಹೇಳುವ "ಬಲಿಷ್ಠ ಕೇಂದ್ರ"ದ ಮಾದರಿಗೆ ತದ್ವಿರುದ್ಧವಾದದ್ದು. ಈ ಕೇಂದ್ರ, ಸಂವಿಧಾನವು ನೀಡಿದ ಹಕ್ಕುಗಳು, ಅಧಿಕಾರಗಳು ಮತ್ತು ಸಂಪನ್ಮೂಲಗಳಿಗೆ ಹೆಚ್ಚು ಹೆಚ್ಚು ಪ್ರಹಾರಗಳನ್ನು ಕೊಡುತ್ತಿದೆ. ಕೇಂದ್ರದಿಂದ ರಾಜ್ಯಗಳಿಗೆ ಹೆಚ್ಚು ಅಧಿಕಾರಗಳು, ಕಾರ್ಯಗಳು ಮತ್ತು ಸಂಪನ್ಮೂಲಗಳನ್ನು ವರ್ಗಾಯಿಸುವಂಥ ಕೇಂದ್ರ-ರಾಜ್ಯ ಸಂಬಂಧ ಈಗ ಪುನರ್‌ರೂಪುಗೊಳ್ಳಬೇಕಾಗಿದೆ.

ಪ್ರಧಾನಮಂತ್ರಿ ಮತ್ತು ಅವರ ಸಹೋದ್ಯೋಗಿಗಳ ಮುಂದೆ ಇರುವ ಪ್ರಶ್ನೆಯೆಂದರೆ, ಅಸ್ಸಾಂ ಮತ್ತು ಇತರ ಈಶಾನ್ಯ ವಲಯದಲ್ಲಿ ತೀವ್ರ ಸ್ವರೂಪದ ಪರಿಸ್ಥಿತಿ ಉದ್ಭವಿಸಿರುವುದರಿಂದ, ಮತ್ತು ದೇಶದ ಇತರ ಭಾಗಗಳಲ್ಲಿ ಬೇರೆ ರೀತಿಯಲ್ಲಿ ಇದು ಗಂಭೀರವಾಗಿ ಕಾಣಿಸಿಕೊಂಡಿರುವುದರಿಂದ ಈ ಸಮಸ್ಯೆಯ ಬಗ್ಗೆ ಎರಡನೇ ಬಾರಿ ಪರಿಶೀಲನೆ ನಡೆಸಬೇಕೆ ಎಂಬುದು.

ಅಸ್ಸಾಂ ಪರಿಸ್ಥಿತಿ ತುಂಬ ಗಂಭೀರವಾದಾಗ ಪ್ರಧಾನಮಂತ್ರಿಯವರು ಎಲ್ಲ ವಿರೋಧ ಪಕ್ಷಗಳನ್ನು ಮತ್ತು ಅಸ್ಸಾಂನ ಎಲ್ಲ ಪಕ್ಷಗಳು ಮತ್ತು ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಒಪ್ಪಂದದಲ್ಲಿ ಒಂದು ಪರಿಹಾರವನ್ನು ರೂಪಿಸಲು ಯತ್ನಿಸಿದ್ದನ್ನು ಹೊಗಳಬೇಕು. ಪ್ರಧಾನ ಮಂತ್ರಿಯಾಗಿ ಅಧಿಕಾರವನ್ನು ಸ್ವೀಕರಿಸಿದ ಹಲವು ವಾರಗಳೊಳಗೆ ಈ ಸಮ್ಮೇಳನವನ್ನು ಕರೆದಿರುವುದು ಮತ್ತು ಅಸ್ಸಾಂಗೆ ಅವರು ಇತ್ತೀಚೆಗೆ ಭೇಟಿ ಕೊಟ್ಟಿರುವುದು ಇವೆರಡೂ ಸ್ವಾಗತಾರ್ಹ ಕ್ರಮಗಳು.

ಈ ಕ್ರಮಗಳಿಂದಲೂ ಯಾವ ಒಪ್ಪತಕ್ಕ ನಿರ್ಧಾರಕ್ಕೆ ಬರಲಾಗದಿರುವುದು ಮತ್ತು ಅಸ್ಸಾಂನ ಚಳುವಳಿಕಾರರು ಈಗಲೂ ಅವರ ಕ್ರಮಗಳಿಗೆ ಒಪ್ಪಲು ತಯಾರಿಲ್ಲದಿರುವುದು ದುರಾದೃಷ್ಟಕರ. ಆ ಪ್ರದೇಶದ ಅಲ್ಪಸಂಖ್ಯಾತರನ್ನು ರಕ್ಷಿಸಲು ಮತ್ತು ದೇಶದ ಇತರ ಭಾಗಗಳಿಗೆ ತೈಲ ಸರಬರಾಜು ನಡೆಯುವಂತೆ ಮಾಡಲು ಅನಿವಾರ್ಯವಾಗಿ ಎಂದು ಹೇಳಿ ಪ್ರಧಾನಮಂತ್ರಿ ಮತ್ತು ಅವರ ಸರ್ಕಾರದವರು "ಕಠಿಣ ಕ್ರಮಗಳನ್ನು" ಕೈಗೊಂಡಿರುವುದೂ ದುರಾದೃಷ್ಟಕರವೇ. ಪ್ರಧಾನಮಂತ್ರಿಯೇ ಪದೇ ಪದೇ ಒಪ್ಪಿಕೊಂಡಿರುವ ಹಾಗೆ, ಇವೆಲ್ಲ ಆ ಸಮಸ್ಯೆಗೆ ಪರಿಹಾರವಲ್ಲ.

ಪ್ರಶ್ನೆ ಇದು: ಪ್ರತಿಯೊಬ್ಬರೂ ಮಾತನಾಡುತ್ತಿರುವ ರಾಜಕೀಯ ಪರಿಹಾರದ ತಿರುಳು ಏನು? ಇದುವರೆಗೆ ಈ ಸಮಸ್ಯೆಯನ್ನು ಆಡಳಿತ ಮತ್ತು ರಾಜಕೀಯ ದೃಷ್ಟಿಯಿಂದ ಸರಿಯಾಗಿ ಬಗೆಹರಿಸದೆ, ಕೇಂದ್ರ ಸರ್ಕಾರವು ಬೆಟ್ಟಗಾಡು ಮತ್ತು ಬಯಲುಸೀಮೆ ಜನರ ವಿಶ್ವಾಸವನ್ನು ಕಳೆದುಕೊಂಡಿದೆ. ಇದನ್ನು ಮತ್ತೆ ಪಡೆಯುವುದು ಹೇಗೆ? ಇದಕ್ಕಿಲ್ಲ ಸರಿಯಾದ ಉತ್ತರವನ್ನು ಕಂಡುಕೊಳ್ಳದಿರುವ ಪ್ರಧಾನ ಮಂತ್ರಿ, ಅವರ ಪಕ್ಷ ಮತ್ತು ಅವರ ಸರ್ಕಾರದವರು, ದೇಶದ ವಿವಿಧ ಭಾಷಾಸಾಂಸ್ಕೃತಿಕ ಮತ್ತು ಸಾಮಾಜಿಕ–ರಾಜಕೀಯ ಶಕ್ತಿಗಳ ಮೇಲೆ ಒರಟಾಗಿ ವರ್ತಿಸುವುದನ್ನು ಬಿಟ್ಟು, ಅತಿ ಕೇಂದ್ರೀಕೃತ ಕೇಂದ್ರಾಡಳಿತ ನಡೆಸುವ ಆಲೋಚನೆಯನ್ನೂ ಬಿಡಬೇಕೆಂದು ನಾವು ಸೂಚಿಸುತ್ತೇವೆ.

ಕೆಲವು ವಿದ್ವಾಂಸರು ಮತ್ತು ಪ್ರಚಾರ ನಡೆಸುವವರು ಸಲಹೆ ಮಾಡುವ ಹಾಗೆ, ಆ ಪ್ರದೇಶದ ಆರ್ಥಿಕ ಬೆಳವಣಿಗೆ ವಿಳಂಬವಾಗಿರುವುದರಿಂದ ಮಾತ್ರ ಅಲ್ಲಿನ ಜನತೆ ವಿಷಣ್ಣರಾಗಿಲ್ಲ. ಭಾರತೀಯ ಜನತೆಯ ವಿಶಿಷ್ಟ ಗುಂಪುಗಳಾಗಿ ತಮ್ಮ ಭಾಷಾಸಾಂಸ್ಕೃತಿಕ ಕುರುಹನ್ನು ಉಳಿಸಿಕೊಳ್ಳುವುದರ ಬಗ್ಗೆ ಅವರು ತುಂಬ ಭಾವುಕರಾಗಿದ್ದಾರೆ. ಆದ್ದರಿಂದ ಈಗ ಮಾಡಬೇಕಾಗಿರುವ ಮೊದಲ ಕೆಲಸವೆಂದರೆ, ಭಾರತೀಯ ರಾಜಕೀಯದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಲು ಸರ್ಕಾರ ಮತ್ತು ಇಡೀ ದೇಶದ ಎಲ್ಲ ರಾಜಕೀಯ ಪಕ್ಷಗಳು ಸಿದ್ಧರಾಗಿರುವುದೆಂದು ಅವರಿಗೆ ಭರವಸೆ ಕೊಡಬೇಕು. ಈ ಪ್ರದೇಶದ ಜನತೆ ಎದುರಿಸುತ್ತಿರುವ ಇನ್ನೊಂದು ಸಮಸ್ಯೆಯಾದ ಬಾಂಗ್ಲಾದೇಶದ ನಿರಾಶ್ರಿತರ ಬಗ್ಗೆ, ಕೇಂದ್ರಸರ್ಕಾರವು ಎಲ್ಲ ರಾಜ್ಯಗಳಿಗೆ ಸಂಬಂಧಿಸಿದಂತೆ ಒಂದು ಹೊಸ ನೀತಿಯನ್ನು ರೂಪಿಸಬೇಕು.

ಇದು ಸುಲಭವಾದ ಕೆಲಸವೇನಲ್ಲ, ಕೇಂದ್ರ ಸರ್ಕಾರ ಮತ್ತು ಈಶಾನ್ಯ ಪ್ರದೇಶದ ಜನತೆಯಷ್ಟೇ ಅಲ್ಲದೆ ಇಡೀ ದೇಶದ ಜನತೆಯ ನಡುವೆ ತಾಳ್ಮೆಯ ಮತ್ತು ನಿರಂತರ ಚರ್ಚೆ ನಡೆಯಬೇಕು. ಇದಕ್ಕೆ ದೇಶದ ಎಲ್ಲ ರಾಜಕೀಯ ಪಕ್ಷಗಳು ಮತ್ತು

(5ನೇ ಪುಟ ನೋಡಿ)

ಗುಂಡೂರಾಯರ ಹುಸಿ ಗುಂಡುಗಳು

—ಎನ್. ಕೆ. ಉಪಾಧ್ಯಾಯ

ಗುಂಡೂರಾಯರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾದಂದಿನಿಂದ ಹಲವಾರು ಹುಸಿಗುಂಡುಗಳನ್ನು ಹಾರಿಸಿದ್ದಾರೆ ಈಗಲೂ ಹಾರಿಸುತ್ತಿದ್ದಾರೆ. ಆಡಳಿತ ನಡೆಸುತ್ತಿರುವವರಲ್ಲಿ ಅದರಲ್ಲೂ ಮುಖ್ಯಮಂತ್ರಿ ಪಟ್ಟದಲ್ಲಿರುವವರು ವಾಗ ನಿಜಸಂಗತಿ ತಿಳಿದು ಅಭಿಪ್ರಾಯ ವ್ಯಕ್ತಮಾಡಬೇಕಾಗುತ್ತದೆ ಅದರಲ್ಲಿ ಗಾಂಭೀರ್ಯತೆ ಇರಬೇಕಾಗುತ್ತದೆ. ಆದರೆ ಸಂಜಯ್‌ಗಾಂಧಿಯ ಗರಡಿಯಲ್ಲಿ ಪಳಗಿರುವ ಗುಂಡೂರಾಯರಿಗೆ ಗಾಂಭೀರ್ಯತೆ ಎಂದರೇನೆಂಬುದೇ ತಿಳಿದಂತೆ ಕಾಣುವುದಿಲ್ಲ.

"ಮಣ್ಣಿನ ಮಕ್ಕಳಿಗೇ ನೌಕರಿ" ಎಂಬ ಸಂಕುಚಿತ ಭಾವನೆಯ ಘೋಷಣೆ ಮಾಡಿದವರು ಇದಕ್ಕೆ ವ್ಯತಿರಿಕ್ತ ಅಭಿಪ್ರಾಯ ಇಂದಿರಾಗಾಂಧಿಯ ಮುಖದಿಂದ ಹೊರಬಿದ್ದ ಕೂಡಲೇ ತಮ್ಮ ಹೇಳಿಕೆಯನ್ನು ತಾವೇ ನುಂಗಿದರು. ಕಾಸರಗೋಡಿನ ಪ್ರಶ್ನೆಯನ್ನೆತ್ತಿದವರು, ಕೇರಳದ ಮುಖ್ಯಮಂತ್ರಿ ನಯನಾರರ ಪ್ರತಿಭಟನೆ ಕೇಳಿಸಲಾರದಾದಾಗ, ಅವರ ಸಮಕ್ಷಮದಲ್ಲೇ ತಿರುಗುಬಾಣ ಬಿಟ್ಟರು. ಇಂದಿರಾಗಾಂಧಿ–ಸಂಜಯಗಾಂಧಿ ಪೋಷಿತ ನಾಟಕ ಕಂಪೆನಿಯ ಮ್ಯಾನೇಜರರಾಗಿ, ಅವರಿಬ್ಬರ ಕೃಪಾಕಟಾಕ್ಷ ಇರುವವರೆಗಷ್ಟೇ ತಾನು ಮುಖ್ಯಮಂತ್ರಿಯಾಗಿರುವವ ಎಂಬ ನಿಷ್ಠೆಯ ನಿಷ್ಪ್ರೂರ ಹೇಳಿಕೆಗಳಿಂದ ತನ್ನ ಪಕ್ಷದಲ್ಲೇ ಗೊಂದಲವೆಬ್ಬಿಸಿ, ಜಾಫರ್ ಶರೀಫ್ ಮೊದಲಾದವರ "ವಿಧಾನಸಭೆ ವಿಸರ್ಜನೆ"ಯ ಊಹಾಪೋಹೆಗೆ ಪುಟ ಕೊಡುತ್ತಿದ್ದಾರೆ.

ಈ ರೀತಿ ತನ್ನ ಪಾರ್ಟಿ, ತನ್ನ ಆಡಳಿತೆ ಹಾಗೂ ಜನತೆಯಲ್ಲಿ ಗೊಂದಲ ಉಂಟುಮಾಡುತ್ತಿರುವಂತೆಯೇ, ಕನ್ನಡಿಗರ ಅತ್ಯಂತ ಜೀವಾಳದ ಸಮಸ್ಯೆಯಾದ ವಿದ್ಯುಚ್ಛಕ್ತಿ–ಕೈಗಾರಿಕಾಭಿವೃದ್ಧಿ ಪ್ರಶ್ನೆಗಳ ಕುರಿತು ನಿರ್ಣಯಗಳು–ಹೇಳಿಕೆಗಳು ಗುಂಡೂರಾಯರ ಅಸಮರ್ಥತೆಯನ್ನು ತೋರಿಸುವ ದಿಕ್‌ಸೂಚಿಗಳಾಗುತ್ತಿವೆ.

ಕಳೆದ 25–30 ವರ್ಷಗಳಿಂದಲೂ ಕರ್ನಾಟಕದ ಜನತೆ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಬೇಕೆಂದು ಹೋರಾಡುತ್ತಾ ಬಂದಿದ್ದಾರೆ. ಕರ್ನಾಟಕದಲ್ಲಿ ಸಾಕಷ್ಟು ಕಬ್ಬಿಣದ ಅದುರು ಸಿಗುತ್ತಿದ್ದರೂ ಕೂಡ, ಭದ್ರಾವತಿ ಉಕ್ಕಿನ ಕಾರ್ಖಾನೆಯೊಂದನ್ನು ಬಿಟ್ಟು (ಅದೂ ಈಗ ಬಂದಾಗಿದೆ, ಅಲ್ಲಿ ಕಬ್ಬಿಣದ ಪೈಪು ತಯಾರಿಸುವ ಕೆಲಸ ನಿಲ್ಲಿಸಲ್ಪಟ್ಟಿದೆ) ಬೇರೆ ಯಾವ ಹೇಳಿಕೊಳ್ಳುವಂತ ಕಾರ್ಖಾನೆಗಳಿಲ್ಲ. ಕಬ್ಬಿಣ ಮ್ಯಾಂಗನೀಸ್ ಅದಿರುಗಳು ಕಾರವಾರ ಗೋವಾ, ಮದ್ರಾಸ್ ಬಂದರುಗಳಿಂದ ವಿದೇಶಕ್ಕೆ ರವಾನೆಯಾಗುತ್ತಿದೆ.

ದಕ್ಷಿಣ ಭಾರತದಲ್ಲಿ ಉಕ್ಕಿನ ಕಾರ್ಖಾನೆಗಳು ಸ್ಥಾಪನೆಯಾಗಬೇಕೆಂದು ಆಂಧ್ರ, ತಮಿಳುನಾಡು, ಕರ್ನಾಟಕದ ಜನತೆ ಹೋರಾಡುತ್ತಾ ಬಂದಿದ್ದಾರೆ. ವಿಶಾಖಪಟ್ಟಣ, ಹೊಸಪೇಟೆ, ಸೇಲಂ ಈ ಕ್ಷೇತ್ರಗಳಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆ ಕುರಿತು ಚರ್ಚೆ ಚಳುವಳಿ ಬಹಳ ಗಂಭೀರವಾಗಿ ನಡೆದಾಗ, 1968–69ರಲ್ಲಿ ಕೇಂದ್ರ ಸರಕಾರ ಒಂದು ಕಮಿಟಿ ನೇಮಿಸಿ (ಅದರಲ್ಲಿ ವಿದೇಶಿ ಪ್ರತಿನಿಧಿಗಳೂ ಇದ್ದರು) ಈ ಮೂರು ಕ್ಷೇತ್ರಗಳ ಪೈಕಿ ಉಕ್ಕಿನ ಕಾರ್ಖಾನೆಗೆ ಅತಿ ಉತ್ತಮವಾದ ಸ್ಥಳ ಯಾವುದು, ಅತಿ ಉಚ್ಚ ಮಟ್ಟದ ಕಬ್ಬಿಣದ ಅದಿರು ಎಲ್ಲಿ ಸಿಗುತ್ತದೆ ಮೊದಲಾದ ವಿಚಾರಗಳನ್ನು ಅಭ್ಯಸಿಸಿ ವರದಿ ಒಪ್ಪಿಸುವಂತೆ ಹೇಳಿತ್ತು. ಸಾಗಾಣಿಕೆ ಮತ್ತು ಕಲ್ಲಿದ್ದಲು ದೃಷ್ಟಿಯಿಂದ ಹೊಸಪೇಟೆಗೆ ಸ್ವಲ್ಪ ಅನಾನುಕೂಲತೆಯಿದ್ದರೂ ಕೂಡ, ಸೇಲಂ ಮತ್ತು ವಿಶಾಖಪಟ್ಟಣಗಳಿಗಿಂತ ಹೊಸಪೇಟೆಯಲ್ಲಿಯ ಅದಿರಿನಲ್ಲಿ ಶೇ. 76 ರಷ್ಟು ಕಬ್ಬಿಣದ ಅಂಶವಿದೆಯೆಂದು ವರದಿ ಮಾಡಿದ್ದರು. 1968–69ರಲ್ಲಿ ಕಾಂಗ್ರೆಸ್ ಇಬ್ಭಾಗವಾಗಿ 1971–72ರಲ್ಲಿ ಚುನಾವಣೆಯನ್ನೆದುರಿಸಬೇಕಾಗಿ ಬಂದುದರಿಂದ "ಚುನಾವಣಾ ರಾಜಕಾರಣ ದೃಷ್ಟಿಯಿಂದ" ಇಂದಿರಾಗಾಂಧಿಯವರು ಮೂರು ಸ್ಥಳಗಳಲ್ಲೂ ಉಕ್ಕಿನ ಕಾರ್ಖಾನೆ ಸ್ಥಾಪಿಸಲಾಗುವುದೆಂದು ಸಾರಿ 1970ರಲ್ಲಿ ಮೂರು ಕಡೆ ಶಂಕುಸ್ಥಾಪನೆ ನೆರವೇರಿಸಿದರು. ಅಷ್ಟಕ್ಕೇ ರಾಜಕಾರಣಿಗಳು ಸಂತುಷ್ಟರಾದರು. ತಮ್ಮ ಆಂತರಿಕ ರಾಜಕಾರಣದ ಗೊಂದಲದಲ್ಲಿ ಉಕ್ಕು ಕಾರ್ಖಾನೆ ನಿರ್ಗತಿಕವಾಯಿತು.

ಕೇಂದ್ರ ಬಜೆಟ್ಟಿನಲ್ಲಿ ಈ ಯೋಜನೆಗಳಿಗಾಗಿ ನಿಗದಿ ಮಾಡಲಾಗಿದ್ದ ಹಣ ಖರ್ಚಾಗಲಿಲ್ಲ. ಆದರೆ ಆಂಧ್ರದ ಡಾ|| ಚೆನ್ನಾರೆಡ್ಡಿ ಮೊದಲಾದ ಕಾಂಗ್ರೆಸ್ ಮುಖಂಡರ ಪ್ರಭಾವದಿಂದ ವಿಶಾಖಪಟ್ಟಣ ಕಾರ್ಖಾನೆಯ ಕೆಲಸ ಪ್ರಾರಂಭವಾಯಿತು. ಮುಂದೆ ಕುಂಟುತ್ತಾ ನಡೆಯುತ್ತಿದೆ,

ಈಗ ಗುಂಡೂರಾಯರು ಗಂಡಸಾಗಿ ಹೊಸಪೇಟೆಯ ವಿಜಯನಗರ ಉಕ್ಕಿನ ಕಾರ್ಖಾನೆಗೆ ಗತಿ ತೋರಿಸಲು ಹೊರಟಿದ್ದಾರೆ. ಹೊಸಪೇಟೆ ಉಕ್ಕು ಕಾರ್ಖಾನೆ ಪ್ರಾರಂಭಿಸಿಯೇ ತೀರುತ್ತೇನೆಂಬ ದೃಢ ವಿಶ್ವಾಸ ವ್ಯಕ್ತಮಾಡಿದ್ದಾರೆ. ಇದೂ ಹುಸಿ ಗುಂಡೆಂದೇ ಎಲ್ಲರೂ ಭಾವಿಸಿದ್ದಾರೆ. ಈ ವರ್ಷದ ಬಜೆಟ್ಟಿನಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಗಾಗಿ 60 ಲಕ್ಷ ರೂ.ಗಳನ್ನು ನಿಗದಿ ಮಾಡಿದ್ದೇನೆಂದು ಎದೆಯುಬ್ಬಿಸಿ ಹೇಳಿದ್ದಾರೆ. ನೂರಾರು ಕೋಟಿ ರೂಪಾಯಿ ಖರ್ಚಿನ ಈ ಯೋಜನೆಗೆ 60 ಲಕ್ಷ ರೂಪಾಯಿ ಯಾವ ಕೆಲಸಕ್ಕೂ ಸಾಲದೆಂದು ಎಲ್ಲರಿಗೂ ಗೊತ್ತು.

ಈಗಾಗಲೇ ಪ್ರಾರಂಭವಾಗಿರುವ ವಿಶಾಖಪಟ್ಟಣ ಉಕ್ಕು ಕಾರ್ಖಾನೆಯ ಕೆಲಸ ಹಣದ ಅಭಾವದಿಂದ ಮುಂದುವರಿಯದಿರುವಾಗ, ಈಗಾಗಲೇ ಕೊರತೆ ಹಣ ವಿನಿಯೋಗದಿಂದ ಅತಿ ಪ್ರಸರಣ ದೇಶದಲ್ಲಿ ತಾಂಡವವಾಡುತ್ತಿರುವಾಗ ವಿಜಯನಗರ ಉಕ್ಕು ಕಾರ್ಖಾನೆ ಪ್ರಾರಂಭವಾಗುತ್ತದೆಂದು ಹೇಳುವುದು ಹಸಿ ಸುಳ್ಳೆಂದು ಹೇಳಿದರೆ ತಪ್ಪಾಗಲಾರದು.

ವಿದೇಶೀಯ ರಾಷ್ಟ್ರದವರು ಈ ಯೋಜನೆ ಕೈಗೊಳ್ಳಲು ಮುಂದಾಗಬೇಕೆಂದು ಹಲವು ವರ್ಷಗಳ ಹಿಂದಿನ ಇಂದಿರಾಗಾಂಧಿಯ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿಲ್ಲ. ವಿಶಾಖಪಟ್ಟಣ ಉಕ್ಕಿನ ಕಾರ್ಖಾನೆ ನಿಯತ ಕಾಲಕ್ರಮಾನುಗುಣವಾಗಿ ಮುಕ್ತಾಯಗೊಳಿಸಲು ಸಾಧ್ಯವಾಗದಿರುವಾಗ ವಿಜಯನಗರದ ಕಾರ್ಯ ಪ್ರಾರಂಭಿಸುವ ಧೈರ್ಯ ಕೇಂದ್ರ ಸರಕಾರಕ್ಕಿದೆಯೆಂದು ಹೇಳುವುದು "ರಾಜಕೀಯ ಸ್ಟಂಟ್". ರಷ್ಯಾ ಮುಂತಾದ ಸಮತಾವಾದಿ ದೇಶಗಳು ಜವಾಬ್ದಾರಿ ಹೊತ್ತರೆ ಮಾತ್ರ ವಿಜಯನಗರ ಕಾರ್ಖಾನೆ ಜಯಪ್ರದವಾಗಲು ಸಾಧ್ಯ.

ಜಾರ್ಜ್‌ಫರ್ನಾಂಡೀಸರು ಕೇಂದ್ರದಲ್ಲಿ ಜನತಾ ಸರ್ಕಾರದ ಕೈಗಾರಿಕಾ ಮಂತ್ರಿಯಾಗಿದ್ದಾಗ, ಕುದುರೆಮುಖದ ಕಬ್ಬಿಣದ ಅದಿರಿನಿಂದ ಮಂಗಳೂರಿನಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸುತ್ತೇನೆಂಬ ಆಶ್ವಾಸನೆಯಿತ್ತಿದ್ದರು. ಕೇಂದ್ರ ಸರಕಾರದ ಉಕ್ಕು ಖಾತೆಕೂಡ ಸಮುದ್ರ ಬದಿಯಲ್ಲೇ ಉಕ್ಕಿನ ಕಾರ್ಖಾನೆ ಪ್ರಾರಂಭಿಸಿದರೆ, ಯೋಗ್ಯವೆಂಬ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

ಗುಂಡೂರಾಯರ ಗುಂಡು ಕೇಂದ್ರ ಸರಕಾರದ ಮೇಲೆ ಸಾಕಷ್ಟು ಪ್ರಭಾವ ಬೀರದಿದ್ದರೂ ಕೂಡ, ಕರ್ನಾಟಕದ ಹಿತದೃಷ್ಟಿಯಿಂದ ವಿಜಯನಗರ ಉಕ್ಕಿನ ಕಾರ್ಖಾನೆ ಆಗಲೇಬೇಕು. ಇದರ ಸಲುವಾಗಿ ಸರ್ವ ಪ್ರಯತ್ನ ಮಾಡಲೇಬೇಕು.

ಗುಂಡೂರಾಯರ ಗುಂಡು ವಿದ್ಯುಚ್ಛಕ್ತಿ ಕಡಿತದ ಮಟ್ಟಿಗೆ ಅತಿ ಕೀಳ್ಮಟ್ಟಕ್ಕಿಳಿಯಿತೆಂದು ಹೇಳಲೇಬೇಕು. ಹೋದ ತಿಂಗಳು ನೂರಕ್ಕೆ ನೂರರಷ್ಟು ವಿದ್ಯುಚ್ಛಕ್ತಿ ಕಡಿತಮಾಡಿ 48 ತಾಸಿನೊಳಗೇ ಮತ್ತೆ ಅದನ್ನು ಪೂರೈಸುವ ಗುಂಡೂರಾಯರ ವಿಚಾರಕ್ಕೆ ವಿವರಣೆ ಇನ್ನೂ ಸಿಕ್ಕಿಲ್ಲ. ವಿವರಣೆ ಕೊಡುವ ಉಸಾಬರಿಗೆ ಗುಂಡೂರಾಯರು ಹೋಗಿಲ್ಲ. ಯಾಕೆಂದರೆ ಕಾಳಿ ಯೋಜನೆಯ ಪೆಡಂಭೂತ ಅವರ ಮುಂದೆ ನರ್ತಿಸುತ್ತಿದೆ. ವಿಜಯನಗರ ಕಾರ್ಖಾನೆಯ ಜವಾಬ್ದಾರಿ ಕೇಂದ್ರದ್ದು. ಆದರೆ ಕಾಳಿಯೋಜನೆ ಕರ್ನಾಟಕ ರಾಜ್ಯದ್ದು. ಈ ಯೋಜನೆಯ ಕುರಿತು ಏನಾದರೂ ಹೇಳಿದ್ದೇ ಆದರೆ "ಮಣ್ಣಿನ ಮಕ್ಕಳಿಗೇ ನೌಕರಿ" "ಕಾಸರಗೋಡು ಕರ್ನಾಟಕದ್ದು" ಎಂಬ ನುಡಿಗಳನ್ನು ನುಂಗಿದಂತೆ, ಕಾಳಿಯ ಕರ್ಮಕಾಂಡವನ್ನೂ ನುಂಗಬೇಕಾಗುತ್ತದೆ. ಕಾಳಿಗುಳಿಗೆ ಅಷ್ಟು ಸುಲಭದಲ್ಲಿ ನುಂಗಲಿಕ್ಕಾಗುವುದಿಲ್ಲ. ಹಿಂದಿನ ಶರಾವತಿ ಯೋಜನೆಯಲ್ಲಿ ಯಾವ ರೀತಿ ನಿಜಲಿಂಗಪ್ಪ, ಜತ್ತಿ, ಕಂಠಿ, ಚೆನ್ನಬಸಪ್ಪ ಮೊದಲಾದವರು ಟೀಕೆಗೆ ಗುರಿಯಾಗಿದ್ದರೋ, ಕಾಳಿ ಯೋಜನೆಯಲ್ಲಿ ಮಂತ್ರಿಗಳಷ್ಟೇ ಅಲ್ಲ, ಮೈಸೂರು ಪವರ್ ಕಾರ್ಪೊರೇಷನ್, ಹಿಂದೂಸ್ತಾನ್ ಸ್ಟೀಲ್ ಕನ್‌ಸ್ಟ್ರಕ್ಷನ್ ಕಂಪೆನಿ ಕೂಡ ಜವಾಬ್ದಾರಿ ಗುನ್ಹೆಗಾರರಾಗಿದ್ದಾರೆ. ಇಂಥ ಯೋಜನಾ ಕೆಲಸಗಳನ್ನು ಮಾಡುವ ಅನುಭವವಿಲ್ಲದಂತ ಹಿಂದೂಸ್ತಾನ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಕಂಟ್ರಾಕ್ಟ್ ಕೊಟ್ಟಂದಿನಿಂದ ಪ್ರಾರಂಭವಾಗಿ, 4 ವರ್ಷ ಕೆಲಸವೇ ಆಗದಿರುವಾಗಲೂ, ಹೋದ ವರ್ಷ ಅಗಸ್ಟ್ ತಿಂಗಳಲ್ಲಿ ಆಗ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸುರವರು ಜನರೇಟರನ್ನು ಚಾಲುಮಾಡುವ ಕಾರ್ಯಕ್ರಮ ಮಾಡಿದಂದಿನಿಂದ "ಏನೋ ಕೆಟ್ಟಿದೆ" ಎಂಬ ನೆವ ಮುಂದೆಮಾಡಿ ಕೆಲಸದ ಯಾವ ಪ್ರಗತಿಯನ್ನೂ ತೋರಿಸದಿರುವ ಈ ಯೋಜನೆಯ "ಒಗಟನ್ನು" ತನ್ನ ಗುಂಡಿನಿಂದ ಬಿಡಿಸಲು ಗುಂಡೂರಾಯರು ಯಾಕೆ ಮುಂದೆ ಬರುತ್ತಿಲ್ಲ?

ವಿಜಯನಗರ ಉಕ್ಕಿನ ಕಾರ್ಖಾನೆಯಷ್ಟೆ ಕಾಳಿಯೋಜನೆ ಮುಖ್ಯವಾಗಿದೆ.

(6ನೇ ಪುಟಕ್ಕೆ)

ಈಶಾನ್ಯ ಪ್ರದೇಶದ ಸಮಸ್ಯೆಗಳಿಗೆ ರಾಜಕೀಯ ಉತ್ತರ

(4ನೇ ಪುಟದಿಂದ)

ಸಂಘಟನೆಗಳು ಒಟ್ಟಾಗಿ ಮನಸ್ಸು ಮಾಡಿ, ಚಳುವಳಿ ನಡೆಸುತ್ತಿರುವ ವಿದ್ಯಾರ್ಥಿಗಳು ಮತ್ತಿತರ ಸಂಸ್ಥೆಗಳಿಗೆ ಚಳುವಳಿ ನಿಲ್ಲಿಸುವಂತೆ, ಸರಕು ಸಾಗಿಸಲು ಅವಕಾಶ ಮಾಡಿಕೊಡುವಂತೆ ಮನವಿಮಾಡಿ, ಒಟ್ಟಿಗೆ ಕೂತು ಇಲ್ಲಿನ ಎಲ್ಲ ಮುಖ್ಯ ಸಮಸ್ಯೆಗಳನ್ನು ಚರ್ಚಿಸಲು ಕೋರಬೇಕು.

ಆದರೆ ಅಸ್ಸಾಂ, ಮೇಘಾಲಯ, ಮಿಜೋರಾಮ್‌ಗಳ ಚಳುವಳಿಕಾರರು ಇಂಥ ರಾಜಿಕ್ರಮಕ್ಕೆ ಒಪ್ಪದೆ, ತಮ್ಮ ಬೇಡಿಕೆಗಳು ಸರ್ಕಾರದಿಂದ ಇಡಿಯಾಗಿ ಈಡೇರಿದ ಹೊರತು ಚಳುವಳಿ ನಿಲ್ಲಿಸುವುದಿಲ್ಲವೆಂದು ಹೇಳುತ್ತಿರುವುದು ದುರದೃಷ್ಟಕರ. ಅವರ ಭಾಷಾಸಾಂಸ್ಕೃತಿಕ ಕುರುಹುಗಳನ್ನು ಕಾಪಾಡಿಕೊಳ್ಳುವ ಹೋರಾಟದಲ್ಲಿ ಇಡೀ ದೇಶದ ಪ್ರಜಾಸತ್ತಾತ್ಮಕ ಚಳುವಳಿಯೇ ಅವರ ಜೊತೆಗಿದೆಯೆಂಬ ಭರವಸೆಯನ್ನು ಅವರಿಗೆ ಕೊಟ್ಟು ಅವರನ್ನು ಈ ದಾರಿಯಿಂದ ಬಿಡಿಸಬೇಕು

ಆದರೆ ಈ ಪರಿಸ್ಥಿತಿಯಿಂದ ರಾಜಕೀಯ ಲಾಭ ಮಾಡಿಕೊಳ್ಳಲು ವಿರೋಧ ಪಕ್ಷಗಳಲ್ಲಿನ ಹಾಗೆ ಕಾಂಗ್ರೆಸ್(ಐ)ನ ಕೆಲವು ಅಂಶಗಳೂ ಹವಣಿಸುತ್ತಿವೆ ಅವರ ಅಸ್ಸಾಂ ದಿಗ್ಬಂಧನದ ಮೂಲಕ ಕಾಂಗ್ರೆಸ್(ಐ)ನವರು ಚಳುವಳಿಯನ್ನು ಪ. ಬಂಗಾಳದ ವಾಮರಂಗ ಸರ್ಕಾರಕ್ಕೆ ಕಾನೂನು ಮತ್ತು ಶಿಸ್ತಿನ ಸಮಸ್ಯೆಯನ್ನು ತರುವುದಕ್ಕೆ ಉಪಯೋಗಿಸಿಕೊಂಡರು. ಚಳುವಳಿಯ ಮುಂದುವರಿಕೆಯಿಂದ ಇಡೀ ದೇಶಕ್ಕೆ ಆಗುವ ತೀವ್ರ ಪರಿಣಾಮಗಳನ್ನು ಲೆಕ್ಕಹಾಕದೆ ವಿರೋಧ ಪಕ್ಷದ ಒಂದು ಗುಂಪು ಅಸ್ಸಾಂ ಚಳುವಳಿಯನ್ನು ಕಾಂಗ್ರೆಸ್(ಐ) ಸರ್ಕಾರದ ವಿರುದ್ಧವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಅಸ್ಸಾಂ ಚಳುವಳಿಗೆ ಒಂದು ಮತೀಯ ಆಯಾಮ ಕೊಡಲು ಆರೆಸ್ಸೆಸ್ ಪ್ರಯತ್ನಿಸುತ್ತಿದೆ. ಏಪ್ರಿಲ್ 20ರ ಆರ್ಗನೈಸರ್‌ನಲ್ಲಿ "ಇನ್‌ಫಿಲ್ಟ್ರೇಟರ್ಸ್ ಅಂಡ್ ರೆಫ್ಯೂಜೀಸ್ ರಿಪಾಟ್ ಬಿ ಆನ್ ಪಾರ್‌ಸೇಸ್ ಬಾಳಾಸಾಹೇಬ ದೇವರಸ್" ಎಂಬ ಹೆಸರಿನ ಲೇಖನವನ್ನು ನೋಡಬಹುದು. 'ಅಸ್ಸಾಂನಲ್ಲಿ ಒಂದು ನಿಜವಾದ ಸಮಸ್ಯೆ ಇದೆ. ಅದು ಹೊರಗಿನವರಾದ ಮುಸ್ಲಿಮರಿಗೆ ಸೇರಿದ್ದೇ ಹೊರತು, ಬಾಂಗ್ಲಾ ದೇಶದಿಂದಾಗಲೀ ಅಥವಾ ಭಾರತದ ಇತರ ರಾಜ್ಯಗಳಿಂದಾಗಲೀ ಬಂದು ಸೇರಿರುವ ಹಿಂದುಗಳಿಗೆ ಸಂಬಂಧಿಸಿದ್ದಲ್ಲ'.

ದೇವರಸ್ ಹೇಳಿರುವುದನ್ನು ವೇದಿಗಾರರು ಇನ್ನಷ್ಟು ಬರೆದಿದ್ದಾರೆ; "ಇಂಗ್ಲೆಂಡ್, ಅಮೇರಿಕಾ, ಕೆನಡಾ ಅಥವಾ ಕೀನ್ಯಾಗಳ ಹಿಂದುಗಳನ್ನು ದೇಶದಾಚೆ ಕಳಿಸಿದರೆ ಅಥವಾ ಹೊರದೂಡಿದರೆ ಅವರು ಎಲ್ಲಿಗೆ ಹೋಗಬೇಕು? ಸಹಜವಾಗಿ ಅವರು ಭಾರತಕ್ಕೆ ಬರುತ್ತಾರೆ. ಅವರಿಗೆ ನಮ್ಮ ದೇಶದಲ್ಲಿ ಪುನರ್ವಸತಿ ಕಲ್ಪಿಸುವುದು ನಮ್ಮ ನೈತಿಕ ಜವಾಬ್ದಾರಿ. ಬಾಂಗ್ಲಾದೇಶದ ಹಿಂದುಗಳ ಬಗ್ಗೆ ನಮ್ಮ ಹೊಣೆ ಇನ್ನಷ್ಟು ಅಧಿಕವಾದದ್ದು ಏಕೆಂದರೆ ಅವರು ವಿಭಜನೆಗೆ ಬಲಿಯಾಗಿದ್ದಾರೆ. ಆದ್ದರಿಂದ ಆ ಭಾಗದಿಂದ ಬರುವ ಹಿಂದುಗಳು ಮತ್ತು ಮುಸ್ಲಿಮರನ್ನು ಒಂದೇ ರೀತಿ ಕಾಣಲಾಗದು. ಅವರಿಬ್ಬರೂ ಎರಡು ಭಿನ್ನ ವಿಭಾಗಗಳಿಗೆ ಸೇರುತ್ತಾರೆ."

ಆರೆಸ್ಸೆಸ್‌ನವರು ಅಸ್ಸಾಂ ಚಳುವಳಿಯನ್ನು ಅವರ ಹಳೇ ಸಿದ್ಧಾಂತವಾದ ಹಿಂದೂರಾಷ್ಟ್ರದ ಜೊತೆ ಸೇರಿಸಲು ಯತ್ನಿಸುತ್ತಾರೆ. ಭಾರತದ ದೇಶ ಮತ್ತು ಸರ್ಕಾರಗಳು ಜಾತ್ಯತೀತ ನೀತಿಗೆ ಸೇರಿದವು. ಅದು ಹಿಂದುಗಳು ಅಥವಾ ಇತರ ಮತವಾದಿಗಳು ಅಥವಾ ನಾಸ್ತಿಕರ ನಡುವೆ ಯಾವ ಭೇದವನ್ನು ಮಾಡುವುದಿಲ್ಲ. ಅವರೆಲ್ಲರಿಗೂ ಅವರಿಗಿಷ್ಟಬಂದುದನ್ನು ಬೋಧಿಸಿ ಆಚರಿಸುವ ಹಕ್ಕು ಇದೆ ಎಂಬುದನ್ನು ಒಪ್ಪುತ್ತಿಲ್ಲ. ಈ ಹಿಂದೂ ರಾಷ್ಟ್ರದ ಸಿದ್ಧಾಂತ ಮತ್ತು ಅದರ ಮುಸ್ಲಿಮ್ ರಾಷ್ಟ್ರದ ಸಹವರ್ತಿಗಳಿಂದ ಐಕ್ಯ ಭಾರತ ಒಡೆದು ಎರಡು ದೇಶವಾಯಿತು. ಆರೆಸ್ಸೆಸ್ ಇದನ್ನು ಮತ್ತೆ ಪುನರಾವರ್ತಿಸಲು ನಿರ್ಧರಿಸಿದಂತಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಮುಂದುವರಿದ ವ್ಯರ್ಥ ಸಾಹಸಗಳು

(3ನೇ ಪುಟದಿಂದ)

ಪ್ರಾಯ ಸಂಗ್ರಹ ನೇಪಾಳದಲ್ಲಿ ಪಕ್ಷ ರಹಿತ ಪಂಚಾಯತ್ ವ್ಯವಸ್ಥೆ ಇರಬೇಕೋ ಅಥವಾ ಬಹುಪಕ್ಷಗಳ ಸಂಸದೀಯ ಪ್ರಜಾಪ್ರಭುತ್ವ ಇರಬೇಕೋ ಎಂಬುದನ್ನು ನಿರ್ಧರಿಸುತ್ತದೆ.

ಭಾರತ ಈ ಪ್ರದೇಶದಲ್ಲಿರುವ ಅತಿ ದೊಡ್ಡ ಅಲಿಪ್ತ ರಾಷ್ಟ್ರವಾಗಿರುವುದು ಮಾತ್ರವಲ್ಲದೆ, ನೆರೆಹೊರೆಯ ದೇಶಗಳಲ್ಲಿರುವ ಅಭದ್ರ ಪರಿಸ್ಥಿತಿ ಸಹಾ ಇಲ್ಲ. ಅದ್ದರಿಂದಲೇ ಈ ಪ್ರದೇಶದ ಬೆಳವಣಿಗೆಗಳಲ್ಲಿ ಭಾರತ ಪ್ರಮುಖ ಪಾತ್ರವಹಿಸುವ ಸಾಧ್ಯತೆಯಿದೆ.

ಪಶ್ಚಿಮದ ಶಕ್ತಿ ರಾಷ್ಟ್ರಗಳು ಮೊದಲು ಭಾರತ (ಅಫ್‌ಘನ್ ವಿಷಯದಲ್ಲಿ) ಸೋವಿಯತ್ ವಿರೋಧಿ ನಿಲುವು ತಳೆಯುವಂತೆ ಹಾಗೂ ಪಾಕಿಸ್ತಾನಕ್ಕೆ ಅಮೇರಿಕಾ ನೀಡುವ ಸೈನ್ಯ ಸಹಾಯವನ್ನು ವಿರೋಧಿಸದಂತೆ ಒತ್ತಡ ತಂದವು. ಇಂದಿರಾಗಾಂಧಿ ಪ್ರಧಾನಿಯಾದ ತಕ್ಷಣ ಭೇಟಿ ನೀಡಿದ ಮೊದಲ ವಿದೇಶಿ ಗಣ್ಯರೆಂದರೆ ಇಂಗ್ಲೆಂಡಿನ ವಿದೇಶಾಂಗ ಕಾರ್ಯದರ್ಶಿ ಲಾರ್ಡ್ ಕ್ಯಾರಿಂಗ್‌ಟನ್ ಅಮೇರಿಕನ್ ಸಾಮ್ರಾಜ್ಯಶಾಹಿಗಳ ತಂತ್ರವನ್ನು ಭಾರತಕ್ಕೆ ಮಾರುವುದೇ ಅವರ ಭೇಟಿಯ ಉದ್ದೇಶವಾಗಿತ್ತು.

ಭಾರತದ ನಿಲುವು :

ಭಾರತ ಸರ್ಕಾರ ತನ್ನ ಉಪ-ಖಂಡದಲ್ಲಿ ಶಕ್ತರಾಷ್ಟ್ರಗಳು ಪೈಪೋಟಿ ನಡೆಸುವುದನ್ನು ಬಿಡಬೇಕು ಎಂದು ಹೇಳಿದ್ದರೂ, ಸದ್ಯದ ಪರಿಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಅಫ್‌ಘಾನಿಸ್ಥಾನದಲ್ಲಿ ಸೋವಿಯತ್ ಯೂನಿಯನ್ನಿನ ಹಸ್ತಕ್ಷೇಪವನ್ನು ಪ್ರತ್ಯೇಕವಾಗಿ ನೋಡುವುದಕ್ಕೆ ಸಾಧ್ಯವಿಲ್ಲವೆಂದು ಭಾರತ ಸರಕಾರ ಸ್ಪಷ್ಟಪಡಿಸಿದೆ. ಯಾವುದೇ ದೇಶದಲ್ಲಿ ವಿದೇಶೀ ಸೈನ್ಯಗಳು ಇರುವುದು ಅಸಂತೋಷದ ವಿಷಯವಾದರೂ ಸೋವಿಯತ್ ಸೈನ್ಯಗಳು ವಾಪಸ್ಸು ಬರುವುದಕ್ಕೆ ಮೊದಲು ಆ ದೇಶದ ಭದ್ರತೆಗೆ ತೊಂದರೆಯುಂಟು ಮಾಡುವುದಿಲ್ಲವೆಂಬ ಆಶ್ವಾಸನೆ ಸಂಬಂಧಪಟ್ಟ ದೇಶಗಳು ನೀಡಬೇಕು. ಭಾರತ ಸರಕಾರ ಪ್ರಾದೇಶಿಕ ಒಪ್ಪಂದಕ್ಕೆ ಬರಲು ಮಾತ್ರ ಒಲವು ವ್ಯಕ್ತಪಡಿಸಿದೆ, ಅಂದರೆ ಪಾಕಿಸ್ತಾನ ಅಮೇರಿಕಾ ನೀಡುವ ಆಯುಧಗಳನ್ನು ಸ್ವೀಕರಿಸಬಾರದು, ಅದರ ಬಾಲಂಗೋಚಿಯಾಗುವುದನ್ನು ಬಿಡಬೇಕು.

ಸಾಮ್ರಾಜ್ಯಶಾಹಿಗಳ ಪ್ರಯತ್ನವನ್ನು ಪ್ರತಿರೋಧಿಸುವ ಈ ಪ್ರಯತ್ನಕ್ಕೆ ಸಮಾಜವಾದಿ ದೇಶಗಳ ಗಣ್ಯರ ಭೇಟಿ ಮತ್ತಷ್ಟು ಸಹಾಯ ಮಾಡಿತು. ಭೇಟಿ ನೀಡಿದ ಗಣ್ಯರ ಪೈಕಿ ಸೋವಿಯತ್ ವಿದೇಶಾಂಗ ವ್ಯವಹಾರಗಳ ಮಂತ್ರಿ ಗ್ರೊಮಿಕೋ, ವಿಯಟ್ನಾಮ್ ಪ್ರಧಾನಿ ಫಾಮ್ ವಾನ್ ಡಾಂಗ್, ಜೆಕೋಸ್ಲೋವಾಕಿಯಾ, ಹಂಗೇರಿ, ಬಲ್ಗೇರಿಯಾದ ವಿದೇಶಾಂಗ ಮಂತ್ರಿಗಳು, ಫಿಡೇಲ್ ಕ್ಯಾಸ್ಟ್ರೋರವರ ಸಂದೇಶ ತೆಗೆದುಕೊಂಡು ಕ್ಯೂಬಾದ ವಿದೇಶಾಂಗ ಮಂತ್ರಿಗಳು ಭಾರತದ ಪ್ರಧಾನ ಮಂತ್ರಿಯನ್ನು ಭೇಟಿ ಮಾಡಿದರು.

ಇದೇ ಸಂದರ್ಭದಲ್ಲಿ ಭಾರತ ಪ್ಯಾಲೆಸ್ಟೈನ್ ವಿಮೋಚನಾ ರಂಗವನ್ನು ಮಾನ್ಯತೆ ಮಾಡಿದ್ದಲ್ಲದೆ ಅದರ ಛೇರ್ಮನ್ ಯಾಸರ್ ಅರಾಫತ್ ಭಾರತಕ್ಕೆ ಭೇಟಿ ನೀಡಿದರು. ಅರಾಫತ್‌ಗೆ ಭಾರತದ ರಾಜಧಾನಿಯಲ್ಲಿ ಹಾರ್ದಿಕ ಸ್ವಾಗತ ನೀಡಲಾಯಿತು. ಇದಕ್ಕೆ ತದ್ವಿರುದ್ಧವಾಗಿ ಈಜಿಪ್ಟ್ ವಿದೇಶಾಂಗ ಮಂತ್ರಿ ಭಾರತಕ್ಕೆ ಭೇಟಿ ನೀಡಿದ್ದನ್ನು ಯಾರೂ ಗಣಿಸಲೇ ಇಲ್ಲ. ಅರಾಫತ್ ಭೇಟಿಯಿಂದ ಭಾರತ ಎಣ್ಣೆ ಉತ್ಪಾದಿಸುವ ಅರಬ್ ದೇಶಗಳೊಂದಿಗೆ ತನ್ನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಿಕೊಂಡಿದೆ.

ಜಿಂಬಾಬ್ವೆ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾರತದ ಪ್ರಧಾನಮಂತ್ರಿಯವರು ಭಾಗವಹಿಸಿದ್ದು, ಜಾಂಬಿಯಾದ ಕೆನೆತ್ ಕಾಂಡ, ತಾಂಜಾನಿಯಾದ ನ್ಯರೇಕಿಯವರೊಂದಿಗೆ ಮಾತುಕತೆ ನಡೆಸಿದ್ದು ಆಫ್ರಿಕನ್ ದೇಶಗಳೊಂದಿಗೆ ನಮ್ಮ ಬಾಂಧವ್ಯವನ್ನು ಉತ್ತಮಪಡಿಸಿದೆ.

ಆದರೆ ಶ್ರೀಮತಿ ಇಂದಿರಾಗಾಂಧಿಯವರ ಸರಕಾರದ ಚುನಾವಣಾ ಸಮಯದಲ್ಲಿ ಭರವಸೆ ನೀಡಿದಂತೆ ಕಾಂಪೂಚಿಯಾದ ಹೆಂಗ್ ಸಾಮ್‌ರಿನ್ ಸರ್ಕಾರಕ್ಕೆ ಮಾನ್ಯತೆ ನೀಡಿಲ್ಲ. ಈ ಬಗ್ಗೆ ಆಗ್ನೇಯ ಏಶಿಯಾ ರಾಷ್ಟ್ರಗಳಿಂದಲೂ ಒತ್ತಡ ಬರುತ್ತಿದೆ. ಅನೇಕ ಏಶಿಯನ್ ರಾಷ್ಟ್ರಗಳು ಕಾಂಪೂಚಿಯಾಕ್ಕೆ ಮನ್ನಣೆ ನೀಡುವ ಬಗ್ಗೆ ಪುನರಾಲೋಚನೆ ಮಾಡುತ್ತಿವೆ. ಅದೇನೇ ಇದ್ದರೂ ಭಾರತ ಸರಕಾರ ಕೂಡಲೇ ಕಾಂಪೂಚಿಯಕ್ಕೆ ಮನ್ನಣೆ ನೀಡಿ ತನ್ನ ಮಾತನ್ನು ಉಳಿಸಿಕೊಳ್ಳಬೇಕು.

ಭಾರತ-ಪಾಕಿಸ್ತಾನದ ಮಾತುಕತೆ :

ಭಾರತ ಮತ್ತು ಪಾಕಿಸ್ತಾನದ ನಡುವೆ ನಡೆಯುತ್ತಿರುವ ಮಾತುಗಳನ್ನು ಈ ಬೆಳವಣಿಗೆಗಳ ಹಿನ್ನಲೆಯಲ್ಲಿ ನೋಡಬೇಕು. ಭಾರತ ಪ್ರಾದೇಶಿಕವಾಗಿ ಒಂದು ಒಪ್ಪಂದಕ್ಕೆ ಬರಬೇಕೆಂಬ ತನ್ನ ನಿಲುಮೆಯ ಹಿನ್ನಲೆಯಲ್ಲಿ ವಿದೇಶಾಂಗ ಕಾರ್ಯದರ್ಶಿ ಆರ್. ಡಿ. ಸಾಠೆಯವರನ್ನು ಪಾಕಿಸ್ತಾನಕ್ಕೆ ಕಳಿಸಿತ್ತು. ಇದರ ಹಿಂದೆಯೇ ಪ್ರಧಾನಮಂತ್ರಿಗಳ ವಿದೇಶ ದೂತರಾಗಿ ಶ್ರೀ ಸ್ವರಣಸಿಂಗ್ ಪಾಕಿಸ್ತಾನಕ್ಕೆ ಹೋಗಿ ಬಂದರು. ಪಾಕಿಸ್ತಾನದ ಅಧ್ಯಕ್ಷ ಮತ್ತು ಪ್ರಧಾನಮಂತ್ರಿಗಳು ಸಾಲಿಸ್‌ಬರಿಯಲ್ಲಿ ಸೇರಿದ್ದಾಗ ಪರಸ್ಪರ ಮಾತನಾಡಿದರು. ಈ ಮಧ್ಯೆ ಅಲಿಪ್ತ ರಾಷ್ಟ್ರಗಳ ಛೇರ್ಮನ್ ಫಿಡೇಲ್ ಕ್ಯಾಸ್ಟ್ರೋರವರು ತಮ್ಮ ವಿದೇಶಾಂಗ ವ್ಯವಹಾರಗಳ ಮಂತ್ರಿಯ ಮೂಲಕ ಪಾಕಿಸ್ತಾನ, ಅಫ್‌ಘಾನಿಸ್ತಾನ ಮತ್ತು ಸೋವಿಯತ್ ದೇಶದೊಂದಿಗೆ ಮಾತುಕತೆ ನಡೆಸಲು ಸಲಹೆ ನೀಡಿದ್ದಾರೆ.

ಸಾಲಿಸ್‌ಬರಿಯಲ್ಲಿ ನಡೆದ ಮಾತುಕತೆಗಳು ಅಪೂರ್ಣವಾಗಿದ್ದು, ಚರ್ಚೆಯನ್ನು ಮುಂದುವರಿಸುವ ಇಚ್ಛೆಯನ್ನು ಪಾಕಿಸ್ತಾನದ ಅಧ್ಯಕ್ಷರು ವ್ಯಕ್ತಪಡಿಸಿದ್ದಾರೆ. ಸಿಮ್ಲಾ ಒಪ್ಪಂದದ ಪ್ರಸ್ತಾಪ, ಸೋವಿಯತ್ ದೇಶದೊಂದಿಗೆ ಮಾತುಕತೆ ನಡೆಸಲು ಸಿದ್ಧವೆಂದು ಅದು ನೀಡಿದ ಹೇಳಿಕೆ, ಅಮೇರಿಕಾದ ಆಯುಧ ಸಹಾಯವನ್ನು ನಿರಾಕರಿಸುವುದಾಗಿ ಮಾಡಿದ ಘೋಷಣೆಗಳು, ಇಸ್ಲಾಮಿಕ್ ವಿದೇಶಾಂಗ ಮಂತ್ರಿಗಳ ಸಮ್ಮೇಳನದಲ್ಲಿ ಪಾಕಿಸ್ತಾನ ತೆಗೆದುಕೊಂಡ ನಿಲುವು ಬದಲಾಯಿಸುವ ಸೂಚನೆಗಳು ಕಾಣುತ್ತಿವೆ.

ಚೀನಾದ ವಿದೇಶಾಂಗ ಮಂತ್ರಿ ಹುವಾಂಗ್ ಹುವಾ ಸಾಲಿಸ್‌ಬರಿಯಲ್ಲಿ ಭಾರತದ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಭಾರತದ ಜೊತೆ ಸಂಬಂಧಗಳನ್ನು ಉತ್ತಮಪಡಿಸುವ ತಮ್ಮ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ.

ಐದು ಅಂಶಗಳ ಸೂತ್ರವೊಂದನ್ನು ಕಾಬೂಲ್ ಸಿದ್ಧಪಡಿಸಿದ್ದು, ಪ್ರಾದೇಶಿಕ ಒಪ್ಪಂದದ ಸಲಹೆಯನ್ನು ಮುಂದಿಡಲಾಗಿದೆ. ಈ ಒಪ್ಪಂದದಲ್ಲಿ ಇರಾನ್, ಅಫ್‌ಘಾನಿಸ್ತಾನ, ಪಾಕಿಸ್ತಾನ ಮತ್ತು ಭಾರತ ಒಳಗೊಳ್ಳುವುದು. ಈ ಒಪ್ಪಂದ ಜಾರಿಯಾದರೆ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಮತ್ತೊಂದು ಪೆಟ್ಟು ಕೊಟ್ಟಂತಾಗುತ್ತದೆ.

ಸಾಮ್ರಾಜ್ಯವಾದದ ಹಿನ್ನಡೆ :

ಅಮೇರಿಕನ್ ಸಾಮ್ರಾಜ್ಯಶಾಹಿಗಳು ತೋಳು ಬಲವನ್ನು ಪ್ರದರ್ಶಿಸಿ, ಮಿಲಿಟರಿ ಆಕ್ರಮಣಕಾರಿ ಸಾಹಸಗಳನ್ನು ಪ್ರದರ್ಶಿಸಲು ಹೊರಟಿದ್ದರೂ, ಸಾಮ್ರಾಜ್ಯವಾದಿ ವಿರೋಧಿ, ಪ್ರಜಾಸತ್ತಾತ್ಮಕ ಶಕ್ತಿಗಳು ಮುನ್ನಡೆಯುತ್ತಿವೆ. ಜಿಂಬಾಬ್ವೆ ಇದಕ್ಕೊಂದು ಇತ್ತೀಚಿನ ಉದಾಹರಣೆ. ಇಲ್ಲಿ ಪಡೆದ ವಿಜಯದ ಪ್ರಭಾವ ಹೋರಾಡುತ್ತಿರುವ ನಮೀಬಿಯಾ ಮತ್ತು ದಕ್ಷಿಣ ಆಫ್ರಿಕದ ಮೇಲೆ ಖಂಡಿತ ಆಗುತ್ತದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳಿ ಯಾವ, ಯಾವ ದೇಶಗಳಲ್ಲಿ ತನ್ನ ಕಾರ್ಯಾಚರಣೆಗಳನ್ನು ನಡೆಸುತ್ತಿದೆಯೋ ಆಯಾ ದೇಶಗಳ ಜನತೆಯೇ ಅದನ್ನು ತಿರಸ್ಕರಿಸುತ್ತಿದೆ. ಮಾತ್ರವಲ್ಲ ತನ್ನ ಮಿತ್ರದೇಶಗಳನ್ನೂ ಅದು ಜೊತೆಗೆ ಒಯ್ಯುವುದು ಅಸಾಧ್ಯವಾಗಿದೆ. ನಾನಾ ಕಡೆಗಳಲ್ಲಿ ಅದು ಹಿನ್ನಡೆ, ಸೋಲನ್ನು ಅನುಭವಿಸುತ್ತಿದ್ದರೂ ತನ್ನ ಪ್ರಯತ್ನವನ್ನು ಮಾತ್ರ ಕೈಬಿಟ್ಟಿಲ್ಲ. ಆದ್ದರಿಂದ ಹಿಂದೆಂದಿಗಿಂತಲೂ ಅಮೇರಿಕನ್ ಸಾಮ್ರಾಜ್ಯವಾದದ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವುದು ಹಾಗೂ ಅದಕ್ಕೆ ಮರಣಾಂತಿಕ ಪೆಟ್ಟು ಕೊಡುವುದು ಅಗತ್ಯವಾಗಿದೆ.

ಭಾರತ ಇದುವರೆಗೂ ಅಫ್‌ಘಾನಿಸ್ತಾನ್ ಪ್ರಶ್ನೆಯಲ್ಲಿ ಸಾಮ್ರಾಜ್ಯವಾದಿಗಳ ಒತ್ತಡವನ್ನು ವಿರೋಧಿಸುತ್ತಲೇ ಬಂದಿದೆ. ಆದರೆ ನಮ್ಮ ಹಿಂದಿನ ಅನುಭವಗಳು, ವಿದೇಶಾಂಗ ನೀತಿ ಯಾವಾಗಲೂ ಒಂದೇ ಧೋರಣೆಯನ್ನು ಅನುಸರಿಸುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿದೆ ಅನೇಕ ವೇಳೆ ಅದು ತೂಗುಯ್ಯಾಲೆಯಂತೆ, ತಿರುವು, ಏರಿಳಿತಗಳನ್ನು ಪಡೆದಿದೆ. ಭಾರತದಂಥ ನೂತನವಾಗಿ ಸ್ವತಂತ್ರಗೊಂಡ ಬಂಡವಾಳಶಾಹಿ-ಭೂಮಾಲಕರ ಸರಕಾರಗಳು ಜಗತ್ತಿನ ಬಂಡವಾಳಶಾಹಿ ಆರ್ಥಿಕ ಪದ್ಧತಿಯೊಂದಿಗೆ ಹೊಂದಿರುವ ಸಂಬಂಧಗಳಿಂದಾಗಿ ಯಾವಾಗಲೂ ಸಾಮ್ರಾಜ್ಯವಾದಿ ವಿರೋಧಿ ನಿಲುವು ತಳೆಯುವುದಕ್ಕೆ ಅಸಮರ್ಥವಾಗಿವೆ. ಪಾಶ್ಚಿಮಾತ್ಯ ರಾಷ್ಟ್ರಗಳು ನೀಡುವ "ನೆರವು", ಬಹುರಾಷ್ಟ್ರೀಯ ಕಂಪನಿಗಳ ಸಹಯೋಗ ಮುಂತಾದವು ಇದಕ್ಕೆ ಮುಖ್ಯ ಕಾರಣಗಳು. ಕೇವಲ ಪ್ರಜಾಸತ್ತಾತ್ಮಕ ಶಕ್ತಿಗಳು ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳ ಐಕ್ಯತೆ ಮಾತ್ರ ಸಾಮ್ರಾಜ್ಯಶಾಹಿಗಳ ಒತ್ತಡವನ್ನು ಯಶಸ್ವಿಯಾಗಿ ಎದುರಿಸಬಹುದು. ಇದೊಂದೇ ಭರವಸೆ ನಮಗೀಗ ಉಳಿದಿರುವುದು.

●

ಗುಂಡೂರಾಯರ ಹುಸಿ ಗುಂಡುಗಳು

(5ನೇ ಪುಟದಿಂದ)

ರಿದೆ. ಅದಕ್ಕಿಂತಲೂ ಹೆಚ್ಚು ಮಹತ್ವದ್ದು. ಕಾಳಿಯ ವಿದ್ಯುಚ್ಛಕ್ತಿಯಿಂದ ಕರ್ನಾಟಕವನ್ನು ಸಣ್ಣ-ದೊಡ್ಡ ಕೈಗಾರಿಕೆಗಳ ನೆಲೆಬೀಡಾಗಿ ಪರಿವರ್ತಿಸಲು ಸಾಧ್ಯ.

ಇಡೀ ಭಾರತ ದೇಶ ಹಾಗೂ ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿಯ ಅಭಾವವನ್ನೆದುರಿಸಿ, ಕಾರ್ಖಾನೆಗಳನ್ನೂ, ಅವುಗಳಲ್ಲಿ ದುಡಿಯುತ್ತಿರುವ ಲಕ್ಷಾವಧಿ ಕೆಲಸಗಾರರನ್ನೂ ಸಂಕಟಕ್ಕೀಡುಮಾಡುತ್ತಿರುವಾಗ, ಕರ್ನಾಟಕಕ್ಕಷ್ಟೇ ಅಲ್ಲ, ನೆರೆಕರೆರಾಜ್ಯಗಳಿಗೂ ವಿದ್ಯುಚ್ಛಕ್ತಿ ಪೂರೈಸುವ ಕಾಳಿಯೋಜನೆ ಎದುರಿಸುತ್ತಿರುವ ಸಮಸ್ಯೆಯನ್ನು ಪರಿಹರಿಸಲು ಗುಂಡೂರಾಯರಾಗಲೀ, ಸಂಬಂಧಪಟ್ಟ ಇತರ ಅಧಿಕಾರಿಗಳಾಗಲೀ ಮುಂದೆಬಾರದೆ ಮೌನವನ್ನಾಚರಿಸುತ್ತಿರುವುದರ ಒಳಗುಟ್ಟೇನು? ಕಮ್ಯುನಿಸ್ಟ್ ಪಾರ್ಟಿ (ಮಾರ್ಕ್ಸಿಸ್ಟ್) ಮತ್ತು ಇತರ ಪ್ರಜಾಪ್ರಭುತ್ವ ಶಕ್ತಿಗಳು ಇದರ ಗುಟ್ಟನ್ನು ಕಂಡುಹಿಡಿಯಲೇಬೇಕು ಮತ್ತು ಜನತೆಗೆ ಅವಶ್ಯಕವಾಗಿರುವ ಯೋಜನೆಗಳ ಜಾರಿಗೆ ಹೋರಾಡಲೇಬೇಕು.

○

ಕಾರ್ಮಿಕರ ಮೇಲೆ ಗೋಳಿಬಾರ್

ಸಿ. ಐ. ಟಿ. ಯು. ಖಂಡನೆ

ಸಿ. ಐ ಟಿ. ಯು. ಅಖಿಲ ಭಾರತ ಅಧ್ಯಕ್ಷ ಕಾಂ. ಬಿ. ಟಿ. ರಣದಿವೆಯವರು ಹೇಳಿಕೆಯೊಂದನ್ನು ನೀಡಿ ತಾ. 28-4-80ರಂದು ರಾತ್ರಿ 10 ಗಂಟೆಗೆ ಪೋಲೀಸರು ಅಮೃತಸರದ 'ಪ್ರತಾಪ್ ಉಕ್ಕು ರೋಲಿಂಗ್ ಮಿಲ್'ನ ಕಾರ್ಮಿಕರ ಮೇಲೆ ಅನಾವಶ್ಯಕವಾಗಿ ಗುಂಡು ಹಾರಿಸಿರುವುದನ್ನು ಖಂಡಿಸಿದ್ದಾರೆ. ಪ್ರಕರಣದಲ್ಲಿ ಮುವತ್ತು ಜನ ಕಾರ್ಮಿಕರು ಗಾಯಗೊಂಡಿದ್ದು, ಐದು ಜನರ ಪರಿಸ್ಥಿತಿ ಚಿಂತಾಜನಕವಾಗಿದೆ. ಕಳೆದ ನಾಲ್ಕು ತಿಂಗಳಲ್ಲಿ ಕಾರ್ಖಾನೆಯ ಆಡಳಿತವರ್ಗ ಮುಖ್ಯವಾದ 70 ಜನ ಕೆಲಸಗಾರರನ್ನು ವಜಾ ಮಾಡಿದ್ದಾರೆ. ಘಟನೆ ನಡೆಯುವುದಕ್ಕೆ ಮೊದಲು ಸ್ಥಳದಲ್ಲಿ ಸಿ. ಐ. ಟಿ. ಯು. ಮತ್ತು ಎ. ಐ. ಟಿ. ಯು. ಸಿ ಮುಖಂಡರು ಸಂಯುಕ್ತವಾಗಿ ಭಾಗವಹಿಸಿದ್ದ ಬಹಿರಂಗ ಸಭೆ ನಡೆಯುತ್ತಿತ್ತು ಇದ್ದಕ್ಕಿದ್ದಂತೆ ನುಗ್ಗಿದ ಪೋಲೀಸ್ ಇನ್‌ಸ್ಪೆಕ್ಟರ್ ದರ್ಶನ್ ಸಿಂಗ್, ಪೋಲೀಸರು ಮತ್ತು ಸಮಾಜಘಾತುಕ ಶಕ್ತಿಗಳು ಕಾರ್ಮಿಕರನ್ನು ಹೊಡೆದು ಗಲಭೆ ಎಬ್ಬಿಸಿದರು.

ಮಾರನೆಯ ದಿನ ಪೋಲೀಸರ ಅಕೃತ್ಯವನ್ನು ಖಂಡಿಸಿ ನಗರದ ಇಡೀ ಕಾರ್ಮಿಕರು ಪ್ರತಿಭಟನಾ ಮೆರವಣಿಗೆ ನಡೆಸಿ, ನ್ಯಾಯಾಂಗ ತನಿಖೆಗೆ ಒತ್ತಾಯಪಡಿಸಿದರು. ತಪ್ಪಿತಸ್ಥರಿಗೆ ಶಿಕ್ಷೆ, ಗಾಯಗೊಂಡವರಿಗೆ ಪರಿಹಾರ, ಬಂಧನಕ್ಕೊಳಗಾದವರ ಬಿಡುಗಡೆ ಆಗದಿದ್ದಲ್ಲಿ ಮೇ 8 ಮತ್ತು 9ರಂದು 48 ಗಂಟೆಗಳ ಮುಷ್ಕರ ಹೂಡುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಕಾರ್ಮಿಕರ ಐಕ್ಯತೆಗಾಗಿ ಅವರನ್ನು ಸಿ. ಐ. ಟಿ. ಯು. ಅಭಿನಂದಿಸಿದೆ. ●

ಮಾಸ್ಕೋ ಮೇ ದಿನಾಚರಣೆಯಲ್ಲಿ ಸಿ.ಐ.ಟಿ.ಯು. ಪ್ರತಿನಿಧಿ

ಸೋವಿಯತ್ ರಷ್ಯಾದ 'ಆಲ್ ಯೂನಿಯನ್ ಸೆಂಟ್ರಲ್ ಕೌನ್ಸಿಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್' ಆಹ್ವಾನದ ಮೇರೆಗೆ ಸಿ.ಐ.ಟಿ ಯು. ಕಾರ್ಯದರ್ಶಿ ಹಾಗೂ ಪ. ಬಂಗಾಳ ವಿಧಾನಸಭಾ ಸದಸ್ಯ ಕಾಂ. ಕಮಲ್ ಸರಕಾರ್ ತಾ. 29-4-80 ರಂದು ಮಾಸ್ಕೋಗೆ ತೆರಳಿದರು. 1980ರ ಮೇ ದಿನಾಚರಣೆಯಲ್ಲಿ ಅವರು ಭಾಗವಹಿಸುತ್ತಾರೆ. ಸಿ.ಐ.ಟಿ. ಯು.ಗೆ ಈ ರೀತಿ ಆಹ್ವಾನ ಬಂದಿರುವುದು, ಇದೇ ಮೊದಲ ಬಾರಿ.

ಮೇ ದಿನಾಚರಣೆ

ಮಂಗಳೂರು :

ಮಂಗಳೂರಿನ ಕೋಡಿಕಲ್‌ನಲ್ಲಿ ಕಾಂ. ರಹಿಮಾನ್‌ರವರ ಅಧ್ಯಕ್ಷತೆಯಲ್ಲಿ ಮೇ ದಿನಾಚರಣೆ ಸಭೆ ಜರುಗಿತು ರಾಜ್ಯದ ರೈತ, ಕಾರ್ಮಿಕ ಮುಖಂಡ ಕಾಂ. ಪಿ. ರಾಮಚಂದ್ರ ರಾಯರು. ರಾಷ್ಟ್ರೀಯ, ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯ ಅವಶ್ಯಕತೆಯನ್ನು ವಿವರಿಸಿದರು. ಕಾಂ. ಹೆಚ್. ಗೋಪಾಲ್ ಸಹಾ ಮಾತನಾಡಿದರು. ಕಾಂ. ಸದಾಶಿವ ಮೈಲಿಯವರು ಧನ್ಯವಾದವನ್ನಿತ್ತರು.

ಕುಂದಾಪುರ :

ದೂರ ದೂರದ ಪ್ರದೇಶಗಳಿಂದ ಬಂದಿದ್ದ ರೈತರು, ಕಾರ್ಮಿಕರು, ಬಾಲಕ-ಬಾಲಕಿಯರಿದ್ದ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲಾಗಿತ್ತು. ಬಹಿರಂಗಸಭೆಯ ಅಧ್ಯಕ್ಷತೆಯನ್ನು ಕಾಂ. ಅಬ್ರಹಾಂ ಕರ್ಕಡ ವಹಿಸಿದ್ದರು. ಕಾಂ. ಕೆ. ಶಂಕರ್ ಸ್ವಾಗತಿಸಿ ಮೇ ದಿನದ ಮಹತ್ವವನ್ನು ವಿವರಿಸಿದರು. ರಾಜ್ಯದ ದುಡಿಯುವ ಜನತೆಯ ಹಿರಿಯ ಮುಂದಾಳು ಕಾಂ. ಎನ್. ಎಲ್. ಉಪಾಧ್ಯಾಯರವರು ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳು, ಶ್ರಮಜೀವಿ ವರ್ಗ ತನ್ನ ಐಕ್ಯತೆಯನ್ನು ಉಳಿಸಿಕೊಂಡು ಎಚ್ಚರವಾಗಿರಬೇಕಾದ ಅಗತ್ಯವನ್ನೂ ವಿವರಿಸಿದರು,

ಸಭೆಯ ಕೊನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಚಿಕ್ಕಮಗಳೂರು :

ಚಿಕ್ಕಮಗಳೂರು ಜಿಲ್ಲಾ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯು ಶ್ರೀಕಂಠಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಮೇ ದಿನಾಚರಣೆಯನ್ನು ಆಚರಿಸಿತು. ಬಿ. ಎಲ್. ತೋಡಿನ್ನಾಯರು ಸ್ವಾಗತಿಸಿದರು.

ಕರ್ನಾಟಕ ವೃತ್ತ ಅಂಚೆ-ತಂತಿ ನೌಕರರ ಪ್ರಧಾನ ಕಾರ್ಯದರ್ಶಿ ಶ್ರೀ ಖ್ವಾಜಾ ಮೊಹಿಯುದ್ದೀನ್ ಮುಖ್ಯ ಅತಿಥಿಯಾಗಿ ಮಾತನಾಡುತ್ತಾ ಶ್ರೀಮತಿ ಗಾಂಧಿಯವರಿಂದ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲವೆಂದರು.

ಹಾಸನ-ಚಿಕ್ಕಮಗಳೂರು ಸಾಮಿಲ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಎ ಕೆ. ವಿಶ್ವನಾಥ್ ಕಾಫಿ ಉದ್ಯಮಿಗಳು ನೌಕರರನ್ನು ಶೋಷಿಸುತ್ತಿರುವುದನ್ನು ಅಂಕಿ-ಅಂಶಗಳ ಸಹಿತ ವಿವರಿಸಿದರು. ಅ. ಭಾ. ಅಂಚೆನೌಕರರ (ನಾಲ್ಕನೆಯ ದರ್ಜೆ) ಸಂಘದ ಕರ್ನಾಟಕ ರಾಜ್ಯದ ಅಧ್ಯಕ್ಷ ಕಾಂ. ಜಯರಾಂ ಮೇ ದಿನದ ಇತಿಹಾಸ ತಿಳಿಸಿದರು.

ಕಾಂ. ಹೇಮಾಪತಿಯವರು ಕಾರ್ಮಿಕರ ತೊಂದರೆಗಳನ್ನು ವಿವರಿಸಿದರು. ವಂದನಾರ್ಪಣೆಯೊಂದಿಗೆ ಸಭೆ ಮುಗಿಯಿತು,

ಬೀದರ್ :

ಸಿ ಪಿ ಐ.(ಎಂ) ಮತ್ತು ಜನತಾ ಪಕ್ಷಗಳು ಜೊತೆಯಾಗಿ ಮೇ ದಿನಾಚರಣೆಯನ್ನು ಆಚರಿಸಿದವು. ಕೆಂಪು ಬಾವುಟಗಳ ಮೆರವಣಿಗೆ ಅಂಬೇಡ್‌ಕರ್ ಚೌಕದಿಂದ ಹೊರಟು ಜಿಲ್ಲಾಧಿಕಾರಿಗಳ ಕಛೇರಿಗೆ ತಲುಪಿತು. ಪೌರ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮನವಿಯನ್ನು ಅರ್ಪಿಸಲಾಯಿತು.

ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿ ಪಿ ಐ (ಎಂ) ಮುಖಂಡರಾದ ಕಾಂ. ಸಂಗ್ರಾಮ್ ಮತ್ತು ಸುಂದರರಾಜ್ ಮಾತನಾಡಿದರು. ಜನತಾಪಕ್ಷದ ಕಾಶೀನಾಥ್ ಸಹಾ ಮಾತನಾಡಿದರು.

ಮೈಸೂರು :

ಮಂಡಿಮೊಹಲ್ಲಾದಲ್ಲಿ ಕುಶಲ ಕಾರ್ಮಿಕರ ಸಂಘದ ಆಶ್ರಯದಲ್ಲಿ ಬೆಳಿಗ್ಗೆ 8 ಗಂಟೆಗೆ ಮೇ ದಿನವನ್ನು ಆಚರಿಸಲಾಯಿತು. ಕಾಂ ಸಿ ಕೆ ಮೋನ್ ಮೇ ದಿನದ ಪ್ರಾಮುಖ್ಯತೆಯನ್ನು ವಿವರಿಸಿದರು. ಕಾಂ. ಸೈಯದ್ ಅಲಿ ಮತ್ತು ಕಾಂ. ಮೊಹಮ್ಮದ್ ಇಸ್ಮಾಯಿಲ್ ಸಂಘಟನೆಯನ್ನು ಬಲಪಡಿಸಲು ಕಾರ್ಮಿಕರಿಗೆ ಕರೆ ನೀಡಿದರು.

ಮೈಸೂರು ದಕ್ಷಿಣದಲ್ಲಿ ರೈಲ್ವೆ ವರ್ಕ್‌ಷಾಪ್ ಆವರಣದಲ್ಲಿ ಬೆಳಿಗ್ಗೆ 9 ಗಂಟೆಗೆ ಕೆಂಬಾವುಟದ ಧ್ವಜಾರೋಹಣದ ಮೂಲಕ ಮೇ ದಿನಾಚರಣೆಯನ್ನು ಪ್ರಾರಂಭಿಸಲಾಯಿತು. ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾಂ. ಎಂ.ಎನ್ ಉಗ್ರಪ್ಪನವರು ಕಾರ್ಮಿಕರ ಹಕ್ಕು ಬಾಧ್ಯತೆಗಳು, ಕರ್ತವ್ಯ, ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ಅವರ ಜವಾಬ್ದಾರಿಯನ್ನು ವಿವರಿಸಿ. ಶೋಷಣೆ ವಿರುದ್ಧ ಹೋರಾಡಲು ಪ್ರತಿಜ್ಞೆ ಕೈಗೊಳ್ಳಬೇಕೆಂದರು. ಕಾಂ ಪದ್ಮನಾಭ ಅಧ್ಯಕ್ಷತೆ ವಹಿಸಿದ್ದರು.

ಸಂಜೆ 6 ಗಂಟೆಗೆ ಕೇಂದ್ರ ಸಂಶೋಧನಾಲಯದ ಮುಂದೆ ಕಾರ್ಮಿಕರು ಪ್ರದರ್ಶನ ನಡೆಸಿ, ಮೇ ದಿನವನ್ನು ಆಚರಿಸಿದರು. ಸಾರ್ವಜನಿಕ ಸಭೆಯಲ್ಲಿ ಕಾಂ. ಎಂ.ಎನ್. ಉಗ್ರಪ್ಪ, ಕೆ ತಿಮ್ಮೇಗೌಡ, ಎಂ. ಚಿಕ್ಕತಮ್ಮಯ್ಯ ಮತ್ತು ಎಂ ಮಹದೇವು ಭಾಷಣ ಮಾಡಿದರು.

ಶಿವಮೊಗ್ಗ :

"ವಸ್ತುಗಳ ಬೆಲೆ ನಿಗದಿ ಮಾಡುವ ಹಕ್ಕು ಉತ್ಪಾದನೆ ಮಾಡುವವನದಾದರೆ, ಶ್ರಮದ ಬೆಲೆಯನ್ನು ನಿಗದಿ ಮಾಡುವ ಹಕ್ಕು ಕಾರ್ಮಿಕನಿಗೆ ಇರಬೇಕು" ಎಂದು ರಾಜ್ಯ ಸಿ ಐ.ಟಿ.ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ತಿಳಿಸಿದರು.

ಮೇ ದಿನಾಚರಣೆಯ ಅಂಗವಾಗಿ ಶಿವಮೊಗ್ಗದಲ್ಲಿ ತಾ. 4-5-80 ರಂದು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾಂ. ಸೂರಿಯವರು "ಮಾಲೀಕನೇ ಕೂಲಿಯನ್ನು ನಿಗದಿ ಮಾಡುವ ವ್ಯವಸ್ಥೆ ಬದಲಾಗಬೇಕು" ಎಂದರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಿ ಪಿ ಐ.(ಎಂ) ಕಾರ್ಯದರ್ಶಿ ಕಾಂ. ಚಂದು ಕುಟ್ಟಿ ವಹಿಸಿದ್ದರು. ಕಾಂ. ಕೃಷ್ಣಾಜಿ ಸ್ವಾಗತ ಕೋರಿದರು. ಕಾಂ ಶಿವಶಂಕರ್ ವಂದಿಸಿದರು.

ಸಭೆಗೆ ಮೊದಲು ಹಮಾಲಿಗಳ ಸಂಘ, ಆಟೋಮೊಬೈಲ್ ಎಂಪ್ಲಾಯೀಸ್ ಯೂನಿಯನ್‌ನ ಸದಸ್ಯರು ಹಾಗೂ ಜನಸಾಮಾನ್ಯರ ಬೃಹತ್ ಮೆರವಣಿಗೆ ನಗರದಲ್ಲಿ ನಡೆಸಲಾಯಿತು.

ಬೆಳಗಾಂ :

ಗಡಿಪ್ರದೇಶವಾದ ಬೆಳಗಾಂನಲ್ಲಿ ಮೇ ದಿನಾಚರಣೆಯನ್ನು ಸಿ.ಐ.ಟಿ ಯು. ಮತ್ತು ಎ ಐ.ಟಿ.ಯು ಸಿ ಸಂಯುಕ್ತವಾಗಿ ನಡೆಸಿದವು ಬೆಳಗಾಂ ಇಂಡಾಲ್ ವರ್ಕರ್ಸ್ ಯೂನಿಯನ್ ಹಾಗೂ ಇತರ ಕಾರ್ಮಿಕ ಸಂಘಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು. ಸ್ಥಳೀಯ ಮರಾಠಿ ದಿನಪತ್ರಿಕೆಯ ಪ್ರಕಾರ ಮೆರವಣಿಗೆಯಲ್ಲಿ ಭಾಗವಹಿಸಿದವರ ಸಂಖ್ಯೆ ಸುಮಾರು ಎಂಟು ಸಾವಿರ.

ಬಹಿರಂಗ ಸಭೆಯಲ್ಲಿ ಸಿ ಐ ಟಿ ಯು. ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ವಿ ಜೆ. ಕೆ. ನಾಯರ್, ಇಂಡಾಲ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಎಸ್. ಎಮ್ ಯಾಹ್ಯಾ ಹಾಗೂ ಎ.ಐ ಟಿ.ಯು ಸಿ ಮುಖಂಡ ಕಾಂ. ಮೆಣ್ಸೆ ಮಾತನಾಡಿ ಕಾರ್ಮಿಕ ವರ್ಗ ಬದಲಿರುವ ದಿನಗಳಲ್ಲಿ ಒಗ್ಗಟ್ಟಾಗಿ ಜಾತೀಯವಾದಿ, ಸರ್ವಾಧಿಕಾರಿ ಶಕ್ತಿಗಳನ್ನು ಎದುರಿಸಬೇಕು, ರಾಜಕೀಯವಾಗಿ ಜಾಗೃತಿಯನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ಪುತ್ತೂರು :

ದ ಕ. ಜಿಲ್ಲೆ ಪುತ್ತೂರಿನಲ್ಲಿ ಕಾರ್ಮಿಕ ಕ್ರಿಯಾ ವೇದಿಕೆ ಆಶ್ರಯದಲ್ಲಿ ಮೇ ದಿನಾಚರಣೆಯನ್ನು ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ವಿಶ್ವನಾಥ ನಾಯಕ್ ವಹಿಸಿದ್ದರು

ಪುತ್ತೂರು ಸಮುದಾಯದ ಕಾರ್ಯದರ್ಶಿ ಕಾಂ. ಸುಬ್ರಮಣ್ಯಭಟ್ ಸ್ವಾಗತಿಸಿದರು. ವಿ. ಗೋಪಾಲಶೆಟ್ಟಿ ಮತ್ತು ಬಳಗದವರು ಕ್ರಾಂತಿಗೀತೆಗಳನ್ನು ಹಾಡಿದರು ರಾಜ್ಯ ರಸ್ತೆಸಾರಿಗೆ ನೌಕರರ ಸಂಘ ಪುತ್ತೂರು ಶಾಖೆ ಕಾರ್ಯದರ್ಶಿ ಕಾಂ ಹೊಳ್ಳ, ಎಲ್.ಐ.ಸಿ. ಯ ಕಾಂ. ಪ್ರಭುಚಂದ್ರರಾವ್ ಹಾಗೂ ಸಿ ಐ ಟಿ ಯು. ಮುಖಂಡ ಕಾಂ. ಬಿ. ರಾಮಕೃಷ್ಣ ಹಾಗೂ ಮುಖ್ಯ ಅತಿಥಿಯಾಗಿ ಬಂದಿದ್ದ ಕಾಂ. ಮುನಿರತ್ನಂ ಮಾತನಾಡಿ ರೈತ-ಕಾರ್ಮಿಕರ ಐಕ್ಯತೆಯನ್ನು ಉಳಿಸಿಕೊಂಡು ಬರಲು ಮನವಿ ಮಾಡಿದರು.

ಕಾರ್ಯಕ್ರಮಕ್ಕೆ ಮೊದಲು ಕಾರ್ಮಿಕರ ಹಿತಕ್ಕಾಗಿ ಬಲಿದಾನ ಮಾಡಿದ ನಾಯಕರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಎ. ಕೆ. ಬೊಳ್ವಾರ್‌ರವರ "ಯಂತ್ರಗಳು" ಎಂಬ ನಾಟಕವನ್ನು ಸಹಾ ಇದೇ ಸಂದರ್ಭದಲ್ಲಿ ಅಭಿನಯಿಸಲಾಯಿತು.

ಶಿಡ್ಲಘಟ್ಟ :

ಕೋಲಾರ ಜಿಲ್ಲಾ, ಶಿಡ್ಲಘಟ್ಟದಲ್ಲಿ ತಾ॥ 11-4-80 ರಂದು ಮೇ ದಿನಾಚರಣೆಯನ್ನು ಆಚರಿಸಲಾಯಿತು. ರೇಷ್ಮೆ ಕಾರ್ಮಿಕರು, ರೈತರು, ಜನಸಾಮಾನ್ಯರ ಮೆರವಣಿಗೆ ವಾದ್ಯಗಳೊಂದಿಗೆ ಇಡೀ ನಗರದಲ್ಲಿ ಪ್ರದರ್ಶನ ನಡೆಸಿತು. ಸಿ.ಐ ಟಿ.ಯು. ಮುಖಂಡ ಸೂರ್ಯನಾರಾಯಣರಾವ್ ರವರನ್ನು ಗಡೀಪಾರು ಮಾಡುವುದರ ವಿರುದ್ಧ ಮೆರವಣಿಗೆ ಸರ್ಕಾರಕ್ಕೆ ಧಿಕ್ಕಾರ ಹಾಕಿತು.

ಸಂಜೆ 5 ಗಂಟೆಗೆ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ. ಜಿ ಪಾಪಣ್ಣ ವಹಿಸಿದ್ದರು. ಪ್ರಾರಂಭದಲ್ಲಿ ಕ್ರಾಂತಿಗೀತೆಗಳನ್ನು ಹಾಡಲಾಯಿತು. ಸ್ಥಳೀಯ ಸಿ.ಪಿ.ಐ.(ಎಂ) ಮುಖಂಡ ಕಾಂ. ಮಣಿ ಎಲ್ಲರನ್ನೂ ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಬಂದಿದ್ದ ಎಸ್. ಎಫ್. ಐ. ರಾಜ್ಯ ಶಾಖೆಯ ಅಧ್ಯಕ್ಷ ಕಾಂ. ಎಂ. ಇಕ್‌ಬಾಲ್ ಹುಸೇನ್ ಹಾಗೂ ಸಿ ಐ ಟಿ.ಯು. ಬೆಂಗಳೂರು ಜಿಲ್ಲಾ ಸಮಿತಿಯ ಉಪಾಧ್ಯಕ್ಷ ಕಾಂ. ಆರ್. ಶ್ರೀನಿವಾಸ್ ಮಾತನಾಡಿ ಮೇ ದಿನದಂದು ಕಾರ್ಮಿಕರು ತಮ್ಮ ಕರ್ತವ್ಯಗಳನ್ನು ಮತ್ತೊಮ್ಮೆ ಜ್ಞಾಪಿಸಿಕೊಂಡು ದೃಢ ನಿರ್ಧಾರದಿಂದ ಹೋರಾಟ ಮಾಡಬೇಕು. ಕೇವಲ ಆರ್ಥಿಕ ಬೇಡಿಕೆಗಳ ಬಗ್ಗೆ ಹೋರಾಟ ಮಾಡದೆ, ರಾಜಕೀಯ ಹೋರಾಟಗಳನ್ನು ಬೆಳೆಸಬೇಕೆಂದರು. ರೈತಸಂಘದ ಕಾರ್ಯದರ್ಶಿ ಕಾಂ. ಲಕ್ಷ್ಮಯ್ಯನವರು ಇದು ಕಾರ್ಮಿಕರ ಯುಗ, ಬಂಡವಾಳಶಾಹಿಗೆ ಸರಿಯಾದ ಉತ್ತರ ನೀಡುವುದು ಕಾರ್ಮಿಕರ ನೇತೃತ್ವದ ಪಕ್ಷದಿಂದ ಮಾತ್ರ ಸಾಧ್ಯವೆಂದರು. ಕರ್ನಾಟಕ ಪ್ರಾಂತ ರೈತಸಂಘದ ಕಾರ್ಯದರ್ಶಿ ಕಾಂ. ವೆಂಕಟೇಶ್ ಸಹಾ ಬಂದಿದ್ದರು. ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಕಾಂ. ದೊರೆಸ್ವಾಮಿ ವಂದನಾರ್ಪಣೆ ಮಾಡಿದರು.

ಮಲ್ಲೇಶ್ವರ :

ಹೆಚ್.ಎಸ್.ಸಿ.ಎಲ್. ಕೆಲಸಗಾರರ ಸಂಘ (ಸಿ.ಐ.ಟಿ.ಯು) ನೇತೃತ್ವದಲ್ಲಿ ಕುದುರೆಮುಖ ಅದಿರು ಯೋಜನೆ ನಡೆಯುತ್ತಿರುವ ಚಿಕ್ಕಮಗಳೂರು ಜಿಲ್ಲೆ, ಮಲ್ಲೇಶ್ವರದಲ್ಲಿ ತಾ॥ 11-5-80 ರಂದು ಮೇ ದಿನಾಚರಣೆಯನ್ನು ಆಚರಿಸಲಾಯಿತು.

ಮೆರವಣಿಗೆಯ ನಂತರ ನಡೆದ ಬಹಿರಂಗ ಸಭೆಯಲ್ಲಿ ಕಾಂ. ರಾಮದಾಸ್ ಆಚಾರ್ಯ, ಕಾಂ ಹಾಲೇಶಪ್ಪ ಭಾಷಣ ಮಾಡಿದರು. ●

ಪುಸ್ತಕ ಪರಿಚಯ

(2ನೇ ಪುಟದಿಂದ)

ತೆಕ್ಕೆಯಲ್ಲಿ ಮೂಡಿ ಬಂದಿಲ್ಲ. ಆದರೆ ಅಧಿಕಾರಶಾಹಿಯ ಧೋರಣೆಯನ್ನು ವ್ಯಂಗ್ಯದಿಂದ ನೋಡುವ ದೃಷ್ಟಿ ಆರೋಗ್ಯಕರವಾದದ್ದು. ಈ ಕಾರ್ಯದರ್ಶಿಯ ಈ ಮಾತು ಗಮನಿಸಿ: "ನನಗೆ ಗೊತ್ತು, ಸರ್ಕಾರ ಮಾಡಿದ ಆ ಕೆಲಸ ಕೆಟ್ಟದಾಗಿತ್ತು, ತುಂಬಾ ಕೆಟ್ಟದಾಗಿತ್ತು. ಆದರೆ ನನ್ನ ನಂಬಿಕೆಯೆಂದರೆ ಏನಾದರೂ ಸಾಧಿಸಬಲ್ಲ ಮಗು ಶಾಲೆಗೆ ಹೋಗಲಿ ಬಿಡಲಿ ಅದನ್ನು ಸಾಧಿಸಿಯೇ ತೀರ್‍ತದೆ. ಇದೆಲ್ಲ ಇಲ್ಲಿ, ಅಂಗೈ ಮೇಲೆ ಬರೆದಿರುತ್ತೆ"- ಈ ಮಾತುಗಳನ್ನಾಡಿ ಬಡವರ ಶಿಕ್ಷಣದ ಆಸೆಯನ್ನು ಮಣ್ಣುಗೂಡಿಸುವ ರೀತಿ ಮತ್ತು ಅಲ್ಲಿಂದಲೇ ಹುಟ್ಟುವ ಪ್ರತಿಭಟನೆ ಈ ಕತೆಯ ವಸ್ತು ಆದರೆ ಅದು ಇನ್ನಷ್ಟು ದಟ್ಟವಾಗಿ, ತೀವ್ರವಾಗಿ ಮಾಡಬಹುದಿತ್ತು 'ಅಬುಲ್ ರೀಶ್ ಮಸೀದಿಯ ಬಳಿ' ಇನ್ನೊಂದು ರೀತಿಯ ಕತೆ. ಇಂಥ ವಸ್ತು ಕನ್ನಡದಲ್ಲೂ ಬಂದಿದೆ. ಹೊಟ್ಟೆಪಾಡಿಗೆ ಬೀದಿಯಲ್ಲಿ ಏನೇನೊ ಆಟಗಳನ್ನು ಆಡಿತೋರಿಸಿ ಹಣಗಳಿಸಿ ಹಸಿವು ಹಿಂಗಿಸಿಕೊಳ್ಳುತ್ತಿದ್ದ ಮುದುಕನೊಬ್ಬ ಮೌಲ್ವಿಯಾಗಿ ಅದರ ಯಾತನೆ ಅನುಭವಿಸುವ ವಸ್ತುವುಳ್ಳ ಕತೆಯಿದು. ಅಲ್ಲಿನ ಧಾರ್ಮಿಕ ಕಟ್ಟಳೆಯಲ್ಲಿ 'ಸ್ವಾತಂತ್ರ್ಯ' ಇಕ್ಕಟ್ಟಿನಲ್ಲಿ ನರಳುತ್ತದೆ. 'ಸುಖ' ಇದ್ದರೂ ಹೊಟ್ಟೆ ತುಂಬುತ್ತಿದ್ದರೂ ಸಮಾಧಾನವಿಲ್ಲ; ತಳಮಳ, ಅಲ್ಲಿಂದ ಬಿಡುಗಡೆ ಪಡೆಯುವ ವ್ಯಕ್ತಿಯ ಸುತ್ತ ಹಬ್ಬುತ್ತ ಸಾಮಾಜಿಕ ಆಯಾಮ ಪಡೆಯುವುದರಲ್ಲಿ ಈ ಕತೆಯ ಯಶಸ್ಸು ಅಡಗಿದೆ.

ಹೀಗೆ ಹೇಳುತ್ತ ಹೋದರೆ ಎಲ್ಲ ಕತೆಗಳನ್ನು ವಿವರಿಸಬೇಕಾದೀತು. ಮೇಲೆ ಉದಾಹರಿಸಿರುವ ಕತೆಗಳಲ್ಲಿ ಸಂಕಲನದ ಯಶಸ್ವಿ ಕತೆಗಳು ಮತ್ತು ಸೋಲುಂಡ ಕತೆಗಳು ಸೇರಿವೆ. ಸೋಲಿಗೆ ಕಾರಣಗಳನ್ನೂ ಗುರುತಿಸಲು ಪ್ರಯತ್ನಿಸಲಾಗಿದೆ. ಈ ಸಂಕಲನದ ಅನುವಾದ ಓದುಗನಿಗೆ ತೊಡಕಾಗದ ರೀತಿಯಲ್ಲಿ ಮೂಡಿಬಂದಿದೆ.

ಕತೆಗಳ ಸೋಲು-ಗೆಲುವು ಏನೇ ಇರಲಿ ಈ ಎರಡು ಸಂಪುಟಗಳು ವಿಶಿಷ್ಟ ಅನುಭವ ಪ್ರಪಂಚವನ್ನು ತಂತಮ್ಮ ರೀತಿಯಲ್ಲಿ ನಮಗೆ ತೆರೆದುಕೊಡುತ್ತವೆ.

●

ಇನ್ನಿಲ್ಲ

ಪಕ್ಷದ ಮಂಗಳೂರಿನ ಅಶೋಕನಗರ ಶಾಖೆಯ ಕಾರ್ಯದರ್ಶಿ ಕಾಂ. ಯು. ಸಂಜೀವರವರ ಮಾತೃಶ್ರೀಯವರಾದ ಶ್ರೀಮತಿ ನಾಗಮ್ಮನವರು ತಾ. 23-4-80 ರಂದು ಅಸ್ವಸ್ಥದಿಂದ ನಿಧನರಾಗಿದ್ದಾರೆ. ಶ್ರೀಮತಿ ನಾಗಮ್ಮನವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭಿಮಾನಿಗಳಾಗಿರುತ್ತಾರೆ.

ಇವರಿಗೆ ಅಶೋಕನಗರ ಪಾರ್ಟಿ ಶಾಖೆಯು ತನ್ನ ಸಂತಾಪ ಸೂಚಿಸಿದೆ.

○

ಕಾರ್ಮಿಕ ಮುಖಂಡರನ್ನು ಗಡೀಪಾರು ಮಾಡಲು ಬಹುರಾಷ್ಟ್ರೀಯ ಸಂಸ್ಥೆಗಳ ಸಂಚು

(ಒಂದನೇ ಪುಟದಿಂದ)

ಈ ಬೇಡಿಕೆಗಳನ್ನು ಈಡೇರಿಸುವುದು ಆಡಳಿತ ವರ್ಗಕ್ಕೆ ಕಷ್ಟವಿಲ್ಲವಾದರೂ, ಸಂಘವನ್ನು ಒಡೆಯಲು ಹಿಂದೆಯೇ ಗೂಂಡಾಗಳನ್ನು ಯೋಜಿಸಿದ್ದರು. ತಾ 30-4-80ರಂದು ರೌಡಿಗಳು ಸುಮಾರು ಇಪ್ಪತ್ತೈದು ಜನ ಕಾರ್ಮಿಕರಿಗೆ ಹೊಡೆದಿದ್ದಾರೆ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕರಿಯಪ್ಪ ಎಂಬುವರನ್ನು ಆ ದಿನ ಕಬ್ಬನ್ ಪಾರ್ಕಿನಲ್ಲಿ ಎಂಟುಜನ ರೌಡಿಗಳು ಸೇರಿ ಕತ್ತಿ, ಮಚ್ಚುಗಳನ್ನು ಉಪಯೋಗಿಸಿ ಹೊಡೆದಿದ್ದಾರೆ. ಅದೇ ದಿನ ಸುಮಾರು 2000ಕ್ಕೂ ಹೆಚ್ಚು ಕಾರ್ಮಿಕರು ಪೋಲೀಸ್ ಕಮೀಷನರ್‌ರವರ ಬಳಿ ಹೋಗಿ ಗೂಂಡಾಗಳಿಂದ ರಕ್ಷಣೆ ಕೇಳಿದರು. ಆದರೆ ಯಾವುದೇ ಆಶ್ವಾಸನೆ ನೀಡಲು ಕಮೀಷನರ್ ನಿರಾಕರಿಸಿದರು.

ಹಲ್ಲೆ ಮಾಡಿದ ಗೂಂಡಾಗಳ ಪಟ್ಟಿಯನ್ನು ಪೋಲೀಸ್ ಕಮೀಷನರ್‌ರವರಿಗೆ ನೀಡಿದ್ದರೂ, ಪೋಲೀಸರು ಇದುವರೆಗೂ ಯಾರ ವಿರುದ್ಧವೂ ಕ್ರಮ ತೆಗೆದುಕೊಂಡಿಲ್ಲ. 107 ಸೆಕ್ಷನ್ ಹಾಕಿ ತಾ. 5-5-80ರಂದು ಸಂಘದ ಪದಾಧಿಕಾರಿಗಳ ಮೇಲೆ ಮೊಕದ್ದಮೆ ಹೂಡಿದ್ದಾರೆ, ಸಂಘದ ಕಾರನ್ನು ಸಹಾ ವಶಪಡಿಸಿಕೊಂಡಿದ್ದಾರೆ.

ಮುಷ್ಕರದ ಸಮಯದಲ್ಲಿ ಮೈಕೋ ಆಡಳಿತವರ್ಗದವರು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ, ಕೆಲಸಕ್ಕೆ ಹಾಜರಾಗುವ ಕೆಲಸಗಾರರಿಗೆ ಪೋಲೀಸ್ ರಕ್ಷಣೆ ನೀಡುವುದಾಗಿ ಪ್ರಕಟಿಸಿದ್ದರು. ಈಗ ಶಾಂತಿ ಮತ್ತು ಸುವ್ಯವಸ್ಥೆ ತಂದು ಗೂಂಡಾಗಿರಿ ತಡೆಯಲು ಜಂಟಿಯಾಗಿ ಪ್ರಯತ್ನಿಸೋಣ, ಪೋಲೀಸರಿಂದ ರಕ್ಷಣೆ ಪಡೆಯೋಣ ಎಂದರೆ ಆಡಳಿತವರ್ಗದವರು ಅದಕ್ಕೆ ಸಿದ್ಧವಿಲ್ಲ. ಇದೇ ವಿಷಯದ ಬಗ್ಗೆ ಜಂಟಿ ಕಾರ್ಮಿಕ ಕಮೀಷನರ್‌ರವರು ತಾ. 9-5-80ರಂದು ಆಡಳಿತವರ್ಗ ಮತ್ತು ಕಾರ್ಮಿಕ ಸಂಘದ ಮುಖಂಡರ ಸಭೆ ಕರೆದಿದ್ದರು. ಆದರೆ ಆಡಳಿತವರ್ಗದವರು ಸಭೆಗೆ ಬರಲೇ ಇಲ್ಲ. ಕಾರ್ಮಿಕ ಕಮೀಷನರ್‌ರವರು ಜಂಟಿಯಾಗಿ ಹೋಗಿ ಪೋಲೀಸ್ ಕಮೀಷನರ್‌ರವರನ್ನು ಭೇಟಿ ಮಾಡಬೇಕೆಂದು ನೀಡಿದ ಸಲಹೆಯನ್ನೂ ಆಡಳಿತವರ್ಗ ತಿರಸ್ಕರಿಸಿದೆ.

ಗಡೀಪಾರು :

ಒಂದು ಕಡೆ ಗೂಂಡಾಗಳನ್ನು ಉಪಯೋಗಿಸಿ ಆಡಳಿತವರ್ಗ ಸಂಘ ಒಡೆಯಲು ಪ್ರಯತ್ನಿಸುತ್ತಿದ್ದರೆ, ಮತ್ತೊಂದು ಕಡೆ ಬಹುರಾಷ್ಟ್ರೀಯ ಸಂಸ್ಥೆಯ ಹಿತವನ್ನು ಕಾಪಾಡಲು ಪೋಲೀಸು-ಸರಕಾರ-ಕಾಂಗ್ರೆಸ್-ಆರೆಸ್ಸೆಸ್‌ಗಳು ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಹಾಗೂ ಮೈಕೋ ಕಾರ್ಮಿಕರ ಸಂಘದ ಏಳು ಜನ ಪದಾಧಿಕಾರಿಗಳನ್ನು ಗಡೀಪಾರು ಮಾಡಲು ಸಂಚು ನಡೆಸಿದ್ದಾರೆ. ಈ ಸಂಚಿನ ಹಿಂದೆ ರಾಜಕೀಯ ಕಾರಣಗಳಿರುವುದು ಸ್ಪಷ್ಟವಿದೆ.

ಆದರೆ ಕಾರ್ಮಿಕ ಮುಖಂಡರನ್ನು ಗಡೀಪಾರು ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಕಾರ್ಮಿಕವರ್ಗವನ್ನು ಕೆಣಕುವ ಸಾಹಸಕ್ಕೆ ಇಳಿದಿರುವ ಗುಂಡೂರಾಯರ ಕಾಂಗ್ರೆಸ್ ಸರಕಾರ ತನ್ನ ಸರ್ವಾಧಿಕಾರಿ ಸ್ವರೂಪವನ್ನು ಬಹಿರಂಗಪಡಿಸಿದೆ. ಕೆಲವು ಜನ ಗೂಂಡಾಗಳನ್ನು ಹತೋಟಿಗೆ ತರಲಾರದ ಸರಕಾರ, ಸಹಸ್ರಾರು ಕಾರ್ಮಿಕರ ಮನವಿಯನ್ನು ಮೂಲೆಗೆ ಹಾಕಿ ದಬ್ಬಾಳಿಕೆಗೆ ಇಳಿದಿದೆ.

ಇವೆಲ್ಲಾ ಘಟನೆಗಳು ನಡೆದಿದ್ದರೂ ಎದೆಗುಂದದೆ ಮೈಕೋ ಕಾರ್ಮಿಕರು ತಮ್ಮ ಕುಟುಂಬಗಳ ಸಹಿತ ತಾ. 17-5-80ರಂದು ಮೆರವಣಿಗೆಯಲ್ಲಿ ಮುಖ್ಯಮಂತ್ರಿಗಳು ಹಾಗೂ ರಾಜ್ಯಪಾಲರಿಗೆ ಮನವಿ ಅರ್ಪಿಸಲಾಗಿದೆ. ಅಂದು ಒಂದು ದಿನದ ಸಾಂಕೇತಿಕ ಮುಷ್ಕರವನ್ನು ಆಚರಿಸಲಾಗುವುದು.

ನಿಷೇಧಾಜ್ಞೆ :

ಮೈಕೋ ಕಾರ್ಮಿಕರ 17-5-80ರ ಕಾರ್ಯಕ್ರಮವನ್ನು ಮುರಿಯಲು ಪೋಲೀಸ್ ಕಮೀಷನರ್‌ರವರು ಬೆಂಗಳೂರು ನಗರದಲ್ಲಿ ತಾ॥ 13-5-80ರಿಂದ ಒಂದು ವಾರ ನಿಷೇಧಾಜ್ಞೆಯನ್ನು ವಿಧಿಸಿದ್ದಾರೆ. ಇದಕ್ಕಾಗಿ ಮೈಕೋ ಆಡಳಿತ ಪೋಲೀಸರಿಗೆ ತನ್ನ ಕೃತಜ್ಞತೆಗಳನ್ನು ಖಂಡಿತ ಸಲ್ಲಿಸುತ್ತದೆ. ಆದರೆ ಈ ಕಾರ್ಮಿಕ ವಿರೋಧಿ ಕ್ರಮವನ್ನು ಪೋಲೀಸ್ ಇಲಾಖೆ ಹೇಗೆ ಸಮರ್ಥಿಸಿಕೊಳ್ಳುವುದೋ ತಿಳಿಯದಾಗಿದೆ. ಪೋಲೀಸರು ಜನತೆಯ ರಕ್ಷಕರಾಗುವ ಬದಲು ದುಡ್ಡಿರುವವರ ದಾಸರಾಗುತ್ತಿರುವುದು ವಿಷಾದನೀಯ.

ಐ. ಟಿ. ಸಿ. :

ಮತ್ತೊಂದು ಬಹುರಾಷ್ಟ್ರೀಯ ಸಂಸ್ಥೆ ಭಾರತದಲ್ಲಿ ನಾಲ್ಕು ಕೋಟಿ ರೂಪಾಯಿಗಳ ವಹಿವಾಟು ಇರುವ ಇಂಡಿಯನ್ ಟೊಬ್ಯಾಕೋ ಕಂಪನಿಯಲ್ಲಿ ದೇಶದಾದ್ಯಂತ 30,000 ಕಾರ್ಮಿಕರು ದುಡಿಯುತ್ತಿದ್ದಾರೆ.

ಐ.ಟಿ.ಸಿ.ಯ ಬೆಂಗಳೂರು ಶಾಖೆ ದೇಶದಲ್ಲಿಯೇ ಅತಿದೊಡ್ಡದಾಗಿದ್ದು 36 ವಿವಿಧ ಸಿಗರೇಟುಗಳನ್ನು ಉತ್ಪಾದಿಸುತ್ತಾರೆ. ದಿನಕ್ಕೆ 42 ಮಿಲಿಯನ್ ಸಿಗರೇಟುಗಳನ್ನು ತಯಾರಿಸುವ ಈ ಕಾರ್ಖಾನೆ ಸರ್ಕಾರದ ಬೊಕ್ಕಸಕ್ಕೆ ಪ್ರತಿ ದಿನ 45 ಲಕ್ಷ ರೂಪಾಯಿ ಎಕ್ಸೈಜ್ ಸುಂಕ ಒಪ್ಪಿಸುತ್ತದೆ.

ಕಾರ್ಖಾನೆ ಪ್ರಾರಂಭವಾದಾಗ ಕೆಲಸ ಮಾಡುತ್ತಿದ್ದ ಸುಮಾರು 500 ಮಹಿಳಾ ಕಾರ್ಮಿಕರನ್ನು ಆಧುನೀಕರಣದ ನೆಪದ ಮೇಲೆ ವಜಾ ಮಾಡಲಾಗಿದೆ. ಆಗ 3000 ಕಾರ್ಮಿಕರು ದಿನಕ್ಕೆ 20 ಮಿಲಿಯನ್ ಸಿಗರೇಟ್‌ಗಳನ್ನು ತಯಾರಿಸಿದರೆ, ಈಗ 2,250 ಕಾರ್ಮಿಕರು ದಿನಕ್ಕೆ 40 ಮಿಲಿಯನ್ ಸಿಗರೇಟ್‌ಗಳನ್ನು ಉತ್ಪಾದಿಸಬೇಕಾಗಿದೆ. ನಿವೃತ್ತರಾಗುವ ಕಾರ್ಮಿಕರ ಬದಲಿಗೆ ಹೊಸ ನೇಮಕಗಳು ಇಲ್ಲ.

ಹಿಂದೆ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದವರು ಎ.ಐ.ಟಿ.ಯು.ಸಿ.ಯ ಕಾಂ. ಎಂ.ಎಸ್. ಕೃಷ್ಣನ್ ಅವರ ಕಾಲದಲ್ಲಿ ಮಾಲೀಕರೊಂದಿಗೆ ಆದ ಒಪ್ಪಂದದ ಪ್ರಕಾರ ಬೋನಸ್ಸನ್ನು ಉತ್ಪಾದನೆಯನ್ನು ಆಧರಿಸಿ ಕೊಡಲಾಗಿದೆ. ಇದರಿಂದಾಗಿ ಕಾರ್ಮಿಕರು ಹೆಚ್ಚಿನ ಬೋನಸ್ ಪಡೆಯುವಂತಿಲ್ಲ. ಈ ಒಪ್ಪಂದದ ನಂತರ ಎಂ.ಎಸ್. ಕೃಷ್ಣನ್ ಸಂಘವನ್ನು ತೊರೆದರು. 1977ರಲ್ಲಿ ಮಾಲೀಕರ ಚಮಚಾಗಳು ಐ.ಟಿ.ಸಿ. ವರ್ಕರ್ಸ್ ಯೂನಿಯನ್ ಹೆಸರಿನಲ್ಲಿ (ರಿಜಿಸ್ಟರ್ ಸಂ 2) ಹೊಸ ಸಂಘವನ್ನು ಪ್ರಾರಂಭಿಸಿದರು. 1978ರಲ್ಲಿ ಎಂ. ಡಿ. ನಟರಾಜ್ ನೇತೃತ್ವದಲ್ಲಿ ಮತ್ತೊಂದು ಸಂಘ, ಐ.ಟಿ.ಸಿ. ಎಂಪ್ಲಾಯೀಸ್ ಅಸೋಸಿಯೇಷನ್ ಎಂಬ ಹೆಸರಿನಲ್ಲಿ ಪ್ರಾರಂಭವಾಯಿತು. ಎರಡೂ ಸಂಘಗಳು ಬೇಡಿಕೆಗಳನ್ನು ಆಡಳಿತ ವರ್ಗದ ಮುಂದಿಟ್ಟರು. ಆಡಳಿತ ವರ್ಗ ಕೇವಲ ಮಾನ್ಯತೆ ಪಡೆದ (ಮೊದಲ) ಸಂಘದೊಂದಿಗೆ ಮಾತ್ರ ಮಾತುಕತೆ ನಡೆಸುವುದಾಗಿ ಹೇಳಿತು. ಆದರೆ ಮಾತುಕತೆಗಳ ವಿವರಗಳನ್ನು ಕಾರ್ಮಿಕರಿಗೆ ತಿಳಿಸಲೇ ಇಲ್ಲ. 1977ರಲ್ಲಿ ಸಂಘ ಪ್ರಾರಂಭವಾದ ನಂತರ ಒಂದೇ ಒಂದು ಸರ್ವಸದಸ್ಯರ ಸಭೆಯನ್ನಾಗಲೀ, ಸಂಘದ ಹಣಕಾಸಿನ ಲೆಕ್ಕವನ್ನಾಗಲೀ ಕಾರ್ಮಿಕರಿಗೆ ಕೊಟ್ಟಿಲ್ಲ.

ಈ ಮಧ್ಯೆ ಮಾನ್ಯತೆ ಪಡೆದ ಸಂಘ ಇದ್ದಕ್ಕಿದ್ದಂತೆ ಒಪ್ಪಂದಕ್ಕೆ ಸಹಿ ಮಾಡಲು ಸಿದ್ಧವಾಯಿತು. ಒಪ್ಪಂದದ ಷರತ್ತುಗಳ ವಿವರಗಳನ್ನು ತಿಳಿಸಲಿಲ್ಲ. ಒಪ್ಪಂದದಂತೆ ಪ್ರತಿಯೊಬ್ಬ ಕಾರ್ಮಿಕನಿಗೆ ಬಡ್ಡಿರಹಿತ 2,500/- ರೂಪಾಯಿ ಸಾಲಸಿಗುವುದೆಂದೂ, ಸಾಲವನ್ನು 50 ಕಂತುಗಳಲ್ಲಿ ವಾಪಸ್ಸು ಮಾಡಬಹುದೆಂದು ಮಾತ್ರ ತಿಳಿಸಲಾಯಿತು. ಆದರೆ ಕಾರ್ಯಕಾರಿ ಸಮಿತಿಯ ಒಂದಿಬ್ಬರು ಸದಸ್ಯರಿಗೆ ಒಪ್ಪಂದದಲ್ಲಿ ಅಧಿಕ ಶ್ರಮಭಾರ, ಇನ್‌ಸೆಂಟೀವ್‌ನಲ್ಲಿ ಕಡಿತ, ಕ್ಯಾಂಟೀನ್ ಸೌಲಭ್ಯದ ಹೆಚ್ಚಳವಿಲ್ಲ, ತುಟ್ಟಿಭತ್ಯೆಯು ಏಕಪ್ರಕಾರವಾಗಿಲ್ಲ ಮುಂತಾದ ಲೋಪದೋಷಗಳಿರುವುದು ತಿಳಿದುಬಂತು.

ಈ ಸಂದರ್ಭದಲ್ಲಿ ಎಂ. ಡಿ. ನಟರಾಜ್‌ರವರ ನೇತೃತ್ವದಲ್ಲಿದ್ದ ಸಂಘದವರು ಸಿ.ಐ.ಟಿ.ಯು. ಅಧ್ಯಕ್ಷರನ್ನು ಭೇಟಿಯಾಗಿ ಅವರನ್ನು ಸಂಘಕ್ಕೆ ಸಲಹೆಗಾರರನ್ನಾಗಿ ತೆಗೆದುಕೊಂಡಿರುವುದಾಗಿಯೂ ಕಾರ್ಮಿಕ ವಿರೋಧಿ ಒಪ್ಪಂದವನ್ನು ತಪ್ಪಿಸಲು ಸಹಾಯ ಮಾಡಬೇಕೆಂದೂ ಕೋರಿದರು. ವಿಷಯವನ್ನು ತಿಳಿದ ಮಾನ್ಯತೆ ಪಡೆದ ಸಂಘದ ಕಾರ್ಮಿಕರು ಸಹಾ ಕಾಂ. ಸೂರಿಯವರನ್ನು ಭೇಟಿಮಾಡಿ ನೇತೃತ್ವ ವಹಿಸಲು ಮನವಿ ಮಾಡಿದರು.

ತಾ॥ 13-3-80ರಂದು ಐ.ಟಿ.ಸಿ. ಕಾರ್ಖಾನೆ ಗೇಟಿನ ಮುಂದೆ ನಡೆದ ಕಾರ್ಮಿಕರ ಸಭೆಯನ್ನು ಉದ್ದೇಶಿಸಿ ಕಾಂ. ಸೂರಿ ಮಾತನಾಡಿದರು. ಅಂದಾಜು 1,500 ಕಾರ್ಮಿಕರು ಹಾಜರಿದ್ದರು. ಆ ಸಭೆಯಲ್ಲಿ ಒಪ್ಪಂದದ ಪೂರ್ಣ ವಿವರಗಳನ್ನು ಕಾರ್ಮಿಕರ ಮುಂದೆ ಇಡುವುದಕ್ಕೆ ಮೊದಲು ಮಾನ್ಯತೆ ಪಡೆದ ಸಂಘದ ಪದಾಧಿಕಾರಿಗಳು ಒಪ್ಪಂದಕ್ಕೆ ಸಹಿಹಾಕಬಾರದೆಂದು ನಿರ್ಧರಿಸಲಾಯಿತು. ತಾ. 17ರಂದು ಈ ಬಗ್ಗೆ ಮತ್ತೆ ಪದಾಧಿಕಾರಿಗಳಿಗೆ ಒತ್ತಾಯಿಸಲಾಯಿತು. ಇದರಿಂದ ಗಾಬರಿಯಾದ ಆಡಳಿತ ವರ್ಗದವರು ತಮ್ಮ ಚೇಲಾಗಳನ್ನು ಕರೆದುಕೊಂಡು ಹೋಗಿ ತಾ. 15-3-80ರಂದು ಜಂಟಿ ಕಾರ್ಮಿಕ ಕಮೀಷನರ್‌ರವರ ಮುಂದೆ ಒಪ್ಪಂದಕ್ಕೆ ಸಹಿ ಹಾಕಿಸಿದರು.

ತಾ. 17-3-80ರಂದು ಸೇರಿದ ಸರ್ವಸದಸ್ಯರ ಸಭೆ ನಡೆದು ಒಪ್ಪಂದವನ್ನು ವಿರೋಧಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ತಾ. 18-3-80ರಿಂದ ಆಡಳಿತವರ್ಗ ಶ್ರಮಭಾರವನ್ನು ಹೆಚ್ಚಿಸುವ ಮೂಲಕ ಒಪ್ಪಂದವನ್ನು ಜಾರಿ ಮಾಡಲು ಯತ್ನಿಸಿತು. ಆದರೆ ಮಾಲೀಕರ ಕುತಂತ್ರವನ್ನು ಎಲ್ಲಾ ಕಾರ್ಮಿಕರು ಒಗ್ಗಟ್ಟಿನಿಂದ ಮುರಿದರು. ತಾ. 13ರಿಂದ ಜಾರಿಗೆ ಬರುವಂತೆ ಉತ್ಪಾದನಾ ವಿಭಾಗದ ಹತ್ತು ಜನ ಕಾರ್ಮಿಕರನ್ನು ವಜಾ ಮಾಡಲಾಯಿತು. ತಾ. 30-3-80ರಿಂದ ಒಪ್ಪಂದವನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯಿಸಿ ಕಾರ್ಮಿಕರು ಮುಷ್ಕರದಲ್ಲಿದ್ದಾರೆ.

ಕಾರ್ಮಿಕರು ಒಂದಾದ್ದನ್ನು ಕಂಡು ಮಾಲೀಕರ ಪರ ಸಂಘದ ಪದಾಧಿಕಾರಿಗಳು ಕಾರ್ಮಿಕ ಕಮೀಷನರ್‌ರವರನ್ನು ಕಂಡು ಒಪ್ಪಂದವನ್ನು ಜಾರಿಗೊಳಿಸಲಾಗಿಲ್ಲವೆಂದು ತಿಳಿಸಿದರು. ಪದಾಧಿಕಾರಿಗಳನ್ನು ಮಾಲೀಕರಿಗೆ ಭೇಟಿ ಮಾಡಿಸಿ ಹೊಸ ಒಪ್ಪಂದವನ್ನು ಮಾಡಿಕೊಳ್ಳುವಂತೆ ಕಾರ್ಮಿಕ ಕಮೀಷನರ್ ನೀಡಿದ ಸಲಹೆಯನ್ನು ಆಡಳಿತವರ್ಗದವರು ಒಪ್ಪಲಿಲ್ಲ.

ಎರಡೂ ಸಂಘಗಳ ಸದಸ್ಯರಿಂದ ಕೂಡಿದ ಕ್ರಿಯಾಸಮಿತಿಯನ್ನು ಕಾಂ. ಸೂರ್ಯನಾರಾಯಣರಾವ್ ನೇತೃತ್ವದಲ್ಲಿ ರಚಿಸಲಾಗಿದೆ. ಕಾರ್ಮಿಕರು ಪ್ರದೇಶವಾರು ಸಭೆ, ಮೆರವಣಿಗೆ ನಡೆಸಿ ಮುಖ್ಯಮಂತ್ರಿ, ರಾಜ್ಯಪಾಲ ಮತ್ತು ಕಾರ್ಮಿಕ ಮಂತ್ರಿಗಳಿಗೆ ಮನವಿಯನ್ನು ನೀಡಿದ್ದಾರೆ.

ನಂಬಲರ್ಹವಾದ ವಲಯಗಳಿಂದ ತಿಳಿದು ಬಂದಂತೆ ರಾಜ್ಯಪಾಲರು ತಾ. 22-4-80ರಂದು ಕಾರ್ಮಿಕ ಮಂತ್ರಿ, ಕಾರ್ಮಿಕ ಕಮೀಷನರ್ ಮತ್ತು ಕಾರ್ಯದರ್ಶಿಗಳನ್ನು ಮಾತುಕತೆಗೆ ಕರೆದಿದ್ದರಂತೆ. ಈ ಸಭೆಯಲ್ಲಿ, ಒಪ್ಪಂದದ ಔಚಿತ್ಯವನ್ನು ಪರಿಶೀಲಿಸಲು ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳನ್ನು ನೇಮಕ ಮಾಡಲು ರಾಜ್ಯಪಾಲರು ಸಲಹೆ ನೀಡಿದ್ದರು. ಆದರೆ ಆಡಳಿತ ವರ್ಗಕ್ಕೆ ಇದು ಹಿಡಿಸದ ಕಾರಣ ರಾಜ್ಯ ಸರಕಾರದ ಮೇಲೆ ಪ್ರಭಾವ ಬೀರಿ ಮುಷ್ಕರವನ್ನು ಪಂಚಾಯಿತಿಗೂ ಒಪ್ಪಿಸದೆ ನಿಷೇಧಿಸಿತು. ಆದರೂ ಮುಷ್ಕರ ಮುಂದುವರಿಯುತ್ತಿದೆ. ಕಾರ್ಮಿಕರು ಮುಷ್ಕರ ನಿಷೇಧ ಮತ್ತು ಒಪ್ಪಂದವನ್ನು ಪ್ರಶ್ನಿಸಿ ಹೈಕೋರ್ಟಿನಲ್ಲಿ ಎರಡು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಇಂಡಾಲ್ :

ಬಹುರಾಷ್ಟ್ರೀಯ ಸಂಸ್ಥೆಯಾದ ಕೆನಡಿಯನ್ ಕಂಪನಿಯೊಂದಿಗೆ ಸಹಯೋಗ ಹೊಂದಿರುವ ಬೆಳಗಾಂ ಅಲ್ಯೂಮಿನಿಯಂ ಕಾರ್ಖಾನೆ (ಇಂಡಾಲ್) ಮಾಲೀಕರು ಬೀಗಮುದ್ರೆ (Lockout) ಘೋಷಿಸಿದ್ದಾರೆ. ಕೇವಲ 2½ ಪೈಸೆಗೆ ಯೂನಿಟ್‌ನಂತೆ ವಿದ್ಯುಚ್ಛಕ್ತಿ ಪಡೆಯುವ ಈ ಕಾರ್ಖಾನೆ ವಿದ್ಯುತ್ ಕೊರತೆಯಿಂದಾಗಿ ಲೇ ಆಫ್ ಘೋಷಿಸಬೇಕಾಗಿತ್ತು. ಆದರೆ ಕಾರ್ಮಿಕರಿಗೆ ಕೊಡಬೇಕಾಗಿದ್ದ ಸಂಬಳವನ್ನು ಕಬಳಿಸಲು ಆಡಳಿತ ವರ್ಗದವರು ಯುಕ್ತಿಯಿಂದ ಬೀಗ ಮುದ್ರೆಯನ್ನು ಘೋಷಿಸಿದ್ದಾರೆ. ಮುಂದುವರಿಯುತ್ತಿರುವ ಕಾರ್ಮಿಕರ ಹೋರಾಟವನ್ನು ಮುರಿಯಲು ಪೋಲೀಸರು ತಾರೀಖು 13-5-80ರಿಂದ ನಿಷೇಧಾಜ್ಞೆಯನ್ನು ಹೊರಡಿಸಿದ್ದಾರೆ.

ಕಾರ್ಮಿಕರು ಮುಷ್ಕರ ಹೂಡಿದರೆ ಅದನ್ನು ಅಕ್ರಮವೆಂದು ಸಾರಿ ಮುಷ್ಕರ ನಿಷೇಧ ಆಜ್ಞೆ ಹೊರಡಿಸುವ ಸರಕಾರಕ್ಕೆ, ಬೀಗಮುದ್ರೆ ಅಕ್ರಮವೆಂದು ಸಾರುವ ಧೈರ್ಯವಿಲ್ಲವೇ ?

ಕರ್ನಾಟಕದ ಕಾರ್ಮಿಕ ಮಂತ್ರಿಗಳು ದುಡಿಯುವ ವರ್ಗದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತಮ್ಮ ಸರಕಾರ ಹಿಂದೆ ಇದ್ದ ಸರಕಾರಗಳಿಗಿಂತ ಮುಂದಿದೆ ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದಾರೆ. ಇದು ಹೌದಾದರೆ ಬಹುರಾಷ್ಟ್ರೀಯ ಸಂಸ್ಥೆಗಳು ನಡೆಸುತ್ತಿರುವ ಈ ಕುತಂತ್ರಕ್ಕೆ ಯಾವ ಉತ್ತರ ನೀಡುತ್ತಾರೆ ? ನಿಷೇಧಾಜ್ಞೆ, ಗಡೀಪಾರು, ಪೋಲೀಸರ ದಬ್ಬಾಳಿಕೆಯಿಂದ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ ಎಂಬುದನ್ನು ಈಗಲಾದರೂ ಅರಿತರೆ ಒಳ್ಳೆಯದು.

ಎ. ಕೆ. ಸುಬ್ಬಯ್ಯನವರ ಹೇಳಿಕೆ :

ಈ ಮಧ್ಯೆ ಆರೆಸ್ಸೆಸ್ ಮೂಲದಿಂದ ಬಂದ ಭಾರತೀಯ ಜನತಾಪಕ್ಷದ (ಮಾಜಿ ಜನಸಂಘ) ಅಧ್ಯಕ್ಷ ಎ. ಕೆ. ಸುಬ್ಬಯ್ಯನವರು ಕಾರ್ಮಿಕರ ಅಶಾಂತಿಗೆ ಸಿ. ಐ. ಟಿ. ಯು. ಕಾರಣವೆಂದು ದೂರಿದ್ದಾರೆ. ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಕಡೆಯವರು ತಮಗೆ ಬೆದರಿಸುತ್ತಿದ್ದಾರೆಂದು ಆರೋಪಿಸಿದ್ದಾರೆ.

ಬಹುಶಃ ಪ್ರಚಾರ ಪಡೆಯಲು ಯಾವ ಮಾರ್ಗವೂ ಇಲ್ಲದೆ ಸುಬ್ಬಯ್ಯನವರು ಈ ದಾರಿಗೆ ಇಳಿದಿರಬಹುದೇ ? ಅಥವಾ ತಮ್ಮ ಫ್ಯಾಸಿಸ್ಟ್ ಮಾತೃ ಸಂಘಟನೆಯ ಜನ್ಮಭೂಮಿಯಾದ ಜರ್ಮನಿಯ ಗುತ್ತೇದಾರಂಗೆ ಅನುಕಂಪ ತೋರಿಸುವ ಭರದಲ್ಲಿ ಬಾಯಿಗೆ ಬಂದದ್ದನ್ನು ಬಡಬಡಿಸುತ್ತಿರಬಹುದು.

ಈ ದುಷ್ಟ ಸಂಚನ್ನು ವಿಫಲಗೊಳಿಸುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ.

○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT